# ಯುಗರಶ್ಮಿ

ಗುಲಾಮಗಿರಿ: ಇಸ್ಲಾಂ ವಿರೋಧಿ ಸಂಪ್ರದಾಯ

ಅಹ್ಮದಿಯಾ ಸಂದೇಶ

ಮಾನವರ ಕರ್ತವ್ಯಗಳ ಕುರಿತು ಇಸ್ಲಾಮಿನ ಉಪದೇಶಗಳು

ಯೇಸುಕ್ರಿಸ್ತರು ಮೃತರಾದುದು ಎಲ್ಲಿ ?

ತ್ರೈಮಾಸಿಕ

ಮಾರ್ಚ್ 1976

ಅಮಾನ್ 1355

ಬೆಲೆ: ರೂ. 1–00.

"ಸಾಲ ಪಡೆದವನು ಸಂಕಟಕ್ಕೊಳಗಾಗಿದ್ದರೆ ಆತನಿಗೆ ಅನುಕೂಲ ಪರಿಸ್ಥಿತಿ ಉಂಟಾಗುವ ತನಕ ಅವಧಿ ಕೊಡಿರಿ. ನೀವು ತಿಳುವಳಿಕೆಯುಳ್ಳವರಾದರೆ ಸಾಲದ ಹಣವನ್ನು ಸಂಪೂರ್ಣ ದಾನವೆಂದು ಬಿಟ್ಟು ಕೊಡುವುದು ಉತ್ತಮ."

—ಪವಿತ್ರ ಖುರ್‌ಆನ್ (2:281)

# ಯುಗರಶ್ಮಿ

ತ್ರೈಮಾಸಿಕ

23 / 1008, ಅನ್ಸಾರಿ ರೋಡ್,

ಬಂದರ್, ಮಂಗಳೂರು -- 575001.

**ಸಂಪುಟ: 1** **ಸಂಚಿಕೆ: 4**

**ಜನವರಿ—ಮಾರ್ಚ್ 1976 / ಸುಲ್ಹ್—ಅಮನ್ 1355**

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿ ಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು

## ವಿಷಯ ಸೂಚಿಕೆ:

ಹಜ಼್ರತ್ ಅಹ್ಮದರ ಉಪದೇಶಗಳು

ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

ಗುಲಾಮಗಿರಿ: ಇಸ್ಲಾಂ ವಿರೋಧಿ ಸಂಪ್ರದಾಯ

ಅಹ್ಮದಿಯಾ ಸಂದೇಶ

ಮಾನವರ ಕರ್ತವ್ಯಗಳ ಕುರಿತು ಇಸ್ಲಾಮಿನ ಉಪದೇಶಗಳು

ಸಂಪಾದಕರಿಗೆ ಪತ್ರ

ಅಹ್ಮದಿಯಾ ವಾರ್ತೆಗಳು

ಪುಸ್ತಕ ವಿಭಾಗ—ಯೇಸುಕ್ರಿಸ್ತರು ಮೃತರಾದುದು ಎಲ್ಲಿ ?

بسم الله الرحمن الرحيم

نحمده ونصلي على رسوله الكريم

# ಯುಗ ರಶ್ಮಿ

ಸಂಪುಟ: 1 | ಜನವರಿ – ಮಾರ್ಚ್ 1976 / ಸುಲ್ಹ್ – ಅಮನ್ 1355 | ಸಂಚಿಕೆ: 4

## ಹಝ್ರತ್ ಅಹ್ಮದರ ಉಪದೇಶಗಳು



ಅಹ್ಮದಿಯಾ ಸಂಘಟನೆಯ ಸ್ಥಾಪಕ
**ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್**

ನಿಮ್ಮ ಶಕ್ತಿಯನ್ನೆಲ್ಲಾ ಭೂಮಿಯಲ್ಲಿ ಪರಮಾತ್ಮನ ಏಕತ್ವವನ್ನು ಸ್ಥಾಪಿಸಲಿಕ್ಕಾಗಿ ವಿನಿಯೋಗಿಸಿರಿ. ನಿಮ್ಮ ನಾಲಗೆ ಇತರರನ್ನು ಬಯ್ಯದಿರಲಿ. ನಿಮ್ಮ ಕೈಗಳು ಅವರನ್ನು ನೋಯಿಸದಿರಲಿ. ನೀವು ಅವರನ್ನು ಉಪದ್ರವಿಸ ಬಾರದು. ಅವರಿಗೆ ಸಹಾಯವನ್ನೀಯಲು ಸಾಧ್ಯವಿದ್ದಷ್ಟು ಶ್ರಮಿಸಿರಿ. ನಿಮ್ಮ ಕೈಕೆಳಗಿನವನಾದರೂ ನಿಮ್ಮ ಕೆಲಸದವನಾದರೂ ಯಾರೊಡನೆಯೂ ವ್ಯರ್ಥವಾಗಿ ಮತ್ತು ಅಹಂಭಾವದಿಂದ ಮಾತಾಡಬೇಡಿರಿ. ನಿಮ್ಮನ್ನು ಬಯ್ದರೂ ನೀವು ಯಾರನ್ನೂ ಬಯ್ಯಬಾರದು; ಭೂಮಿಯಲ್ಲಿ ವಿನಯಭಾವದಿಂದಲೂ ಶಾಂತ ಗುಣದಿಂದಲೂ ನಡೆಯಿರಿ. ಸಹಜೀವಿಗಳೊಡನೆ ಅನುಕಂಪವನ್ನು ತೋರಿಸಿರಿ. ಹಾಗಿದ್ದರೆ ಪರಮಾತ್ಮನು ನಿಮ್ಮನ್ನು ಸ್ವೀಕರಿಸುವನು. ಹೊರಗೆ ವಿನಯಭಾವವನ್ನು ತೋರ್ಪಡಿಸುವ ಜನರು ಹಲವರಿದ್ದಾರೆ; ಆದರೆ ಒಳಗೆ ಅವರು ಕೊಳ್ಳೆಯನ್ನು ಹುಡುಕಿಕೊಂಡು ಅಲೆಯುವ ತೋಳಗಳಾಗಿದ್ದಾರೆ. ಹೊರ ನೋಟಕ್ಕೆ ಶಾಂತಶೀಲರು ಹಲವರಿದ್ದಾರೆ; ಆದರೆ ಅವರ ಸ್ವಭಾವ ಸರ್ಪದ್ದಾಗಿದೆ. ನಿಮ್ಮ ನಾಲಗೆ ನಿಮ್ಮ ಹೃದಯಕ್ಕೆ ಅನುರೂಪವಾಗಿರುವ ತನಕ ನಿಮ್ಮ ದೈವ ನಿಮ್ಮನ್ನು ಸ್ವೀಕರಿಸಲಾರನು. ನೀವು ಉನ್ನತ ಸ್ಥಾನ

ದಲ್ಲಿರುವಿರಾದರೆ ನಿಮ್ಮ ಔನ್ನತ್ಯದ ಕುರಿತು ಅಹಂಕರಿಸದಿರಿ; ನಿಮಗಿಂತ ಕೀಳಾಗಿರುವವರನ್ನು ನಿಂದಾದೃಷ್ಟಿಯಿಂದ ನೋಡದೆ ಅವರೊಡನೆ ಕರುಣೆಯನ್ನು ತೋರಿಸಿರಿ. ನೀವು ವಿದ್ಯಾವಂತರೆಂದಾದರೆ ನಿಮ್ಮ ವಿದ್ಯೆಯ ಕುರಿತು ಡಂಭನ್ನು ತೋರಿಸದಿರಿ; ವಿದ್ಯೆಯಿಲ್ಲದವರನ್ನು ಅಪಹಾಸ್ಯ ಮಾಡದೆ ಅವರಿಗೆ ಒಳ್ಳೆಯ ಉಪದೇಶ ನೀಡಿರಿ. ನೀವು ಧನವಂತರಾಗಿದ್ದರೆ ನಿಮ್ಮ ಸಿರಿವಂತಿಕೆಯಲ್ಲಿ ಗರ್ವವನ್ನು ತೋರಿಸದಿರಿ; ಬಡವರೊಡನೆ ಅಹಂಭಾವದಿಂದ ವರ್ತಿಸದೆ ಅವರಿಗೆ ಸಹಾಯವನ್ನೀಯಿರಿ. ನಾಶದೆಡೆಗಿರುವ ದಾರಿಗಳನ್ನೆಲ್ಲಾ ಮುಚ್ಚಿಡಿರಿ. ಪರಮಾತ್ಮನಿಗೆ ಹೆದರಿ ಧರ್ಮ ನಿಷ್ಠೆಯನ್ನು ತೋರಿಸಿರಿ. ಸೃಷ್ಟಿಗಳನ್ನು ಪೂಜಿಸಬೇಡಿರಿ. ಪೂರ್ಣವಾಗಿ ನೀವು ದೈವ ಭಕ್ತಿಯಲ್ಲಿ ಮಗ್ನರಾಗಿರಿ. ನಿಮ್ಮ ಆನಂದ ಈ ಲೋಕದಲ್ಲಾಗಿರಬಾರದು. ಪರಮಾತ್ಮನ ಸೇವೆಯನ್ನು ಮಾಡಿರಿ. ನಿಮ್ಮ ಜೀವಿತವನ್ನು ಅವನ ಕೆಲಸಕ್ಕಾಗಿ ವಿನಿಯೋಗಿಸಿರಿ. ದೈವಕ್ಕಾಗಿ ಎಲ್ಲಾ ತರದ ಅಶುದ್ಧತೆಯನ್ನೂ ದುಷ್ಟತೆಯನ್ನೂ ತ್ಯಜಿಸಿರಿ. ಕಾರಣ, ನಿಮ್ಮ ಪರಮಾತ್ಮನು ಪರಿಶುದ್ಧನು. ರಾತ್ರಿ ಇಡೀ ಧಾರ್ಮಿಕಾವಸ್ಥೆಯಲ್ಲಿ ಕಳೆಯಿತೆಂದು ಪ್ರತಿಯೊಂದು ಪ್ರಭಾತ ನಿಮಗೆ ಸಾಕ್ಷ್ಯ ನುಡಿಯಲಿ; ಹಗಲು ಇಡೀ ದೈವ ಭಯದಲ್ಲಿ ಕಳೆಯಿತೆಂದು ಪ್ರತಿಯೊಂದು ಸಾಯಾಹ್ನ ನಿಮಗೆ ಸಾಕ್ಷ್ಯ ನುಡಿಯಲಿ.

❖❖❖❖❖❖


ಇಸ್ಲಾಮಿನ ಯಥಾರ್ಥವಾದ ತತ್ವಜ್ಞಾನವನ್ನು ಮತ್ತು ಅದರ ಅಸದೃಶವಾದ ಮಹತ್ವವನ್ನು ಪ್ರಕಾಶಿಸಲಿಕ್ಕೂ ಜಾಗತಿಕ ಶಾಂತಿ, ಸರ್ವ ಸಮುದಾಯ ಮೈತ್ರಿ ಎಂಬೀ ಮಹತ್ಕಾರ್ಯಗಳನ್ನು ಲಕ್ಷ್ಯವಾಗಿರಿಸಿಕೊಂಡೂ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರಿಂದ ಸ್ಥಾಪಿತವಾದ ಒಂದು ಮಹತ್ ಸಂಘಟನೆಯಾಗಿದೆ ಅಹ್ಮದಿಯಾ ಜಮಾಅತ್.

ಏಷ್ಯಾದ ನಾನಾ ಭಾಗಗಳಲ್ಲೂ ಯುರೋಪ್, ಅಮೇರಿಕ, ಆಫ್ರಿಕ, ಆಸ್ಟ್ರೇಲಿಯ ಎಂಬೀ ಭೂಖಂಡಗಳಲ್ಲೂ ಹಝ್ರತ್ ಅಹ್ಮದ್ (ಅ)ರ ಮೂರನೆಯ ಖಲೀಫ ಹಾಗೂ ಅಹ್ಮದಿಯಾ ಜಮಾಅತಿನ ಈಗಿನ ಇಮಾಂ ಆಗಿರುವ ಹಝ್ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್‌ರವರ ನೇತೃತ್ವದಲ್ಲಿ ಪ್ರವರ್ತಿಸುತ್ತಿರುವ ಈ ಸಾರ್ವಲೌಕಿಕ ಸಂಘಟನೆಯ ಕುರಿತು ತಿಳಿಯಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಇಂಗ್ಲಿಷ್, ಹಿಂದಿ, ಉರ್ದು, ಮಲೆಯಾಳಂ ಭಾಷೆಗಳಲ್ಲಿ ಪುಸ್ತಕಗಳನ್ನು ಒದಗಿಸಲಾಗುವುದು.

**SECRETARY TABLIG,**
**Anjuman Ahmadiya,**
**P. O. Mogral,**
**Via - KUMBLA - 670321. (Karala State)**

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ದ್ರೋಹಿತನ ಪ್ರಾರ್ಥನೆಯಿಂದ ಸುರಕ್ಷಿತರಾಗಿರಿ. ಏಕೆಂದರೆ ಅವನಿಗೂ ಪರಮಾತ್ಮನಿಗೂ ಮಧ್ಯೆ ಏನೂ ತಡೆಯಿಲ್ಲ.

2. ದ್ರೋಹವನ್ನು ಮಾಡದಿರಿ. ದ್ರೋಹವು ಪರಲೋಕದಲ್ಲಿ ನಿಮಗೆ ಅಂಧಕಾರವನ್ನುಂಟುಮಾಡುವುದು. ಅತ್ಯಾಶೆಯಿಂದ ದೂರವಿರಿ; ಏಕೆಂದರೆ ಅತ್ಯಾಶೆಯು ನಿಮಗಿಂತ ಮೊದಲು ಸಹ ಹಲವರನ್ನು ನಾಶ ಮಾಡಿದೆ. ಇತರರ ರಕ್ತಪಾತವನ್ನು ಮಾಡಿ ಅವರ ಸೊತ್ತುಗಳನ್ನು ತಮ್ಮದನ್ನಾಗಿ ಮಾಡಲು ಅತ್ಯಾಶೆ ಅವರನ್ನು ಪ್ರೇರೇಪಿಸಿತು.

3. ತನ್ನನ್ನು ಆಶ್ರಯಿಸಿಕೊಂಡಿರುವವರೊಡನೆ ಜಿಪುಣತನವನ್ನು ತೋರಿಸುವವನು ಪಾಪಿಯಾಗಿದ್ದಾನೆ.

4. "ನೀವು ನಿಮ್ಮ ಸಹೋದರರನ್ನು ಸಹಾಯಿಸಿರಿ—ಅವರು ದ್ರೋಹಿತರಾಗಿರಲಿ ಅಥವಾ ದ್ರೋಹಿಯಾಗಿರಲಿ." ಆಗ ಪೈಗಂಬರರ ಅನುಯಾಯಿಗಳು ಕೇಳಿದರು: "ದ್ರೋಹಿತನನ್ನು ಸಹಾಯಿಸಬಹುದು, ಆದರೆ ದ್ರೋಹಿಯನ್ನು ಹೇಗೆ ಸಹಾಯಿಸುವುದು?" ಪೈಗಂಬರರು ಉತ್ತರಿಸಿದರು: "ಅಪರಾಧವನ್ನು ಮಾಡದಂತೆ ಅವರನ್ನು ತಡೆಯುವ ಮೂಲಕ."

5. ತಾನು ಇಷ್ಟಪಡುವುದನ್ನೇ ತನ್ನ ಸಹೋದರನಿಗೂ ಇಷ್ಟಪಡದವನು ಯಥಾರ್ಥ ಮುಅಮಿನ್ (ವಿಶ್ವಾಸಿ) ಅಲ್ಲ.

6. ಮನುಷ್ಯನ ದೇಹದೊಳಗೆ ಒಂದು ಮಾಂಸ ಖಂಡವಿದೆ. ಅದು ಒಳ್ಳೆಯದಾದರೆ ದೇಹವಿಡೀ ಒಳ್ಳೆಯದಾಗುತ್ತದೆ. ಅದು ಹಾಳಾದರೆ ಶರೀರವಿಡೀ ಹಾಳಾಗುತ್ತದೆ. ಜಾಗೃತರಾಗಿ ಕೇಳಿರಿ; ಅದು ಹೃದಯವಾಗಿದೆ.

7. ಅಲ್ಲಾಹುವಿನ ತ್ರಾಸಿನಲ್ಲಿ ಸದ್ ಸ್ವಭಾವಕ್ಕಿಂತ ಹೆಚ್ಚು ತೂಗುವ ವಸ್ತುವಿಲ್ಲ.

8. ಕೆಲಸದವರಿಗೆ ಅವರ ಬೆವರು ಆರುವ ಮೊದಲೇ ಕೂಲಿಯನ್ನು ಕೊಡಿರಿ.

9. ವಸ್ತುಗಳನ್ನು ತೂಕ ಮಾಡಿ ಕೊಡುವಾಗ ತ್ರಾಸು, ಕೊಳ್ಳುವವನಿಗೆ ಅನುಕೂಲವಾಗಿರಲಿ.

10. ಅಭಾವವನ್ನುಂಟುಮಾಡಿ ಅದರಿಂದ ಲಾಭವನ್ನು ಗಳಿಸುವ ಉದ್ದೇಶದಿಂದ ಧಾನ್ಯಗಳನ್ನು ಸಂಗ್ರಹಿಸಿಡುವವನು ಪಾಪಿಯಾಗಿದ್ದಾನೆ.

# ಗುಲಾಮಗಿರಿ: ಇಸ್ಲಾಮಿಕ ವಿರೋಧಿ — ಸಂಪ್ರದಾಯ —

ಇಸ್ಲಾಂ ಅಸಂದಿಗ್ಧ ಭಾಷೆಯಲ್ಲಿ ಗುಲಾಮಗಿರಿ ಪದ್ಧತಿಯನ್ನು ವಿರೋಧಿಸುತ್ತದೆ. ಮನುಷ್ಯರನ್ನು ಗುಲಾಮರನ್ನಾಗಿ ಮಾಡುವ ಸಂಪ್ರದಾಯವನ್ನು ವಿರೋಧಿಸಿ, ಗುಲಾಮರನ್ನು ಸ್ವತಂತ್ರರನ್ನಾಗಿ ಮಾಡಲು ಅನುಯಾಯಿಗಳಿಗೆ ಆಜ್ಞಾಪಿಸಿದ ಏಕವಂತ ಇಸ್ಲಾಮಾಗಿದೆ ಎಂಬುದು ಸತ್ಯ. ಓರ್ವ ಸ್ವತಂತ್ರ ಪುರುಷನನ್ನೋ, ಸ್ತ್ರೀಯನ್ನೋ ಗುಲಾಮ ಅಥವಾ ಗುಲಾಮಳನ್ನಾಗಿ ಮಾಡುವ ಹೀನವಾದ ಸಂಪ್ರದಾಯಕ್ಕೆದೂರಾಗಿ ಪವಿತ್ರ ಖುರ್‌ಆನಿನ ಅನುಜ್ಞೆಯನ್ನನುಸರಿಸಿ ನಿರಂತರ ಪ್ರಬೋಧಿಸಿ ಗುಲಾಮರನ್ನು ಸ್ವತಂತ್ರರನ್ನಾಗಿ ಮಾಡುವುದರಿಂದ ಲಭಿಸುವ ಪುಣ್ಯವನ್ನು ಪ್ರಬೋಧಿಸಿದವರು ಮುಹಮ್ಮದ್ ಪೈಗಂಬರರಾಗಿದ್ದರು. ಗುಲಾಮಗಿರಿ ಎಂಬ ಈ ದುಷ್ಟ ಸಂಪ್ರದಾಯವನ್ನು ಎಷ್ಟು ಶಕ್ತಿಯುತವಾದ ಭಾಷೆಯಲ್ಲಿ ಪೈಗಂಬರರು ಆಕ್ಷೇಪಿಸಿದ್ದರೆಂದು ಪೈಗಂಬರರ ಚರಿತ್ರೆ ಪ್ರಸಿದ್ಧವಾದ ಪ್ರಖ್ಯಾಪನೆಯೇ ವ್ಯಕ್ತಗೊಳಿಸುತ್ತದೆ. ಪೈಗಂಬರರು 'ಹಜ್ಜತುಲ್ ವಿದಾ' ಭಾಷಣದಲ್ಲಿ ಈ ರೀತಿ ಘೋಷಿಸಿದರು.

"ಇಂದಿನಿಂದ ಯಾರನ್ನೂ ಗುಲಾಮರನ್ನಾಗಿ ಮಾಡಲು ಅನುಮತಿಸಲಾಗುವುದಿಲ್ಲ. ಓರ್ವ ಸ್ವತಂತ್ರವ್ಯಕ್ತಿಯನ್ನು ಗುಲಾಮಗಿರಿಗೆ ಒಳಪಡಿಸುವುದು ಕೊಲೆಪಾತಕಕ್ಕೆ ತುಲ್ಯವಾಗಿದೆ''. ಎಷ್ಟು ಮಹತ್ತಾದ ಒಂದು ಪಾಠವಾಗಿದೆ ಇದು! ಗುಲಾಮಗಿರಿಯನ್ನು ಆಕ್ಷೇಪಿಸಿದ ಏಕ ಮತಾಚಾರ್ಯ, ಮನುಷ್ಯ ವಂಶೋದ್ಧಾರಕರಾದ ಮುಹಮ್ಮದ್ ಪೈಗಂಬರರು ಮಾತ್ರರಾಗಿದ್ದರು ಎಂಬ ವಸ್ತುತಃ ಯಾರಿಗೆ ನಿಷೇಧಿಸಲು ಸಾಧ್ಯ? ಗುಲಾಮರನ್ನು ಗುಲಾಮಗಿರಿಯಿಂದ ಮುಕ್ತರನ್ನಾಗಿ ಮಾಡಲು ಮನುಷ್ಯ ಸ್ನೇಹಪರವಾದ ಮಾರ್ಗವನ್ನು ಲೋಕಕ್ಕೆ ಕಾಣಿಸಿಕೊಟ್ಟದ್ದು ಸಹ ಆ ಮಹಾತ್ಮ ಮಾತ್ರವಾಗಿದ್ದರು.

ಮುಹಮ್ಮದ್ ಪೈಗಂಬರರ ಸ್ವಭಾವವನ್ನು ವಿವರಿಸಲು ಅಗತ್ಯಪಡಿಸಿದಾಗ, ಸ್ನೇಹ ಸಂಪನ್ನೆಯೂ ಅತೀವ ಭಕ್ತೆಯೂ ಆದ ಅವರ ಪತ್ನಿ ಹಝ್‌ರತ್ ಆಯಿಷಾ ಹೀಗೆಂದರು: "ಅವರ ಸ್ವಭಾವ ಖುರ್‌ಆನ್ ಆಗಿತ್ತು''. ಖುರ್‌ಆನಿನಲ್ಲಿ ಅಡಕವಾದ ಎಲ್ಲಾ ಪಾಠಗಳ ಉತ್ತಮ ಮಾದರಿ ಅವರಾಗಿದ್ದರು ಎಂದಾಗಿದೆ ಇದರರ್ಥ. ತಾನು ಪ್ರಬೋಧಿಸಿದೆಲ್ಲವನ್ನೂ ಆ ಮಹಾಪುರುಷರು ತನ್ನ ಜೀವನದಲ್ಲಿ ಮಾಡಿ ತೋರಿಸಿದರು. ಅವರು ಯಾರನ್ನೂ ಗುಲಾಮರನ್ನಾಗಿ ಮಾಡಲು ಅನುಮತಿಸಲಿಲ್ಲ. ತದ್ವಿರುದ್ಧವಾಗಿ ಗುಲಾಮರ ಅತ್ಯಂತ ಸ್ನೇಹಿತನೂ ವಿಮೋಚಕನೂ ತಾನು ಆಗಿದ್ದನೆಂದು ಅವರು ರುಜುಪಡಿಸಿದರು.

ತನ್ನ ಅಧೀನದಲ್ಲಿ ಬಂದ ಸಂಪತ್ತನ್ನು ಅವರು ಹೇಗೆ ವಿನಿಯೋಗಿಸಿದರು ಎಂಬುದು ಮನುಷ್ಯ ಕುಲಕ್ಕೆಲ್ಲ ಒಂದು ಪ್ರಾಯೋಗಿಕ ಪಾಠವಾಗಿದೆ. ತನ್ನ ಸಂಪತ್ತಿನಲ್ಲಿ ಬಹ್ವಂಶವನ್ನು ಅವರು ಬಡವರಿಗೆ ದಾನ ಮಾಡಿದರು. ತನ್ನ ಆಧೀನಕ್ಕೆ ಬಂದ ಎಲ್ಲಾ ಗುಲಾಮರನ್ನು ಅವರು ಸ್ವತಂತ್ರರನ್ನಾಗಿ ಮಾಡಿದರು.

ಗುಲಾಮರಿಗೆ ಪೈಗಂಬರರೊಡನೆ ಎಷ್ಟರ ಮಟ್ಟಿಗೆ ಆದರತೆಯೂ ಸ್ನೇಹಾನುಬಂಧವೂ ಇತ್ತು ಎಂಬುದನ್ನು ಈ ಕೆಳಗಿನ ಸಂಭವದಿಂದ ತಿಳಿದುಕೊಳ್ಳಬಹುದು. ಪೈಗಂಬರರು ಸ್ವತಂತ್ರರನ್ನಾಗಿ ಮಾಡಿದ ಗುಲಾಮರಲ್ಲಿ ಒಬ್ಬರಾಗಿದ್ದರು ಸೈದ್ ಎಂಬವರು. ಸೈದ್ ತನ್ನ ಯಜಮಾನರನ್ನು ಒಮ್ಮೆಯೂ ಬಿಟ್ಟಗಲದ ರೀತಿಯಲ್ಲಿ ಪೈಗಂಬರರೊಡನೆ ಅಂಟಿಕೊಂಡಿದ್ದರು. ತಮ್ಮೊಡನೆ ಸ್ವಗೃಹಕ್ಕೆ ಹಿಂತಿರುಗಲು ಸೈದ್‌ರವರ ಸಂಬಂಧಿಕರು ಬಂದು ಆಗತ್ಯಪಡಿಸಿದಾಗ, ಪೈಗಂಬರರನ್ನು ಬಿಟ್ಟಗಲುವುದು ತನಗೆ ಸಹಿಸಲಾಗದೆಂದು ಅವರೊಡನೆ ಸೈದ್

ಹೇಳಿ, ಅವರೊಡನೆ ಹೋಗಲು ಒಡಂಬಡಲಿಲ್ಲ. ಸೈದಿಗೂ ಪೈಗಂಬರರಿಗೂ ಇರುವ ಬೇರ್ಪಡಿಸಲಾಗದ ಸ್ನೇಹಬಂಧವನ್ನು ಸಂಬಂಧಿಕರು ಮನಗಂಡಾಗ, ಅವರು ಸೈದನ್ನು ಪೈಗಂಬರರ ಹತ್ತಿರವೇ ಬಿಟ್ಟು ಹಿಂತಿರುಗಿ ಹೋದರು.

ಗುಲಾಮರನ್ನು ಸ್ವತಂತ್ರರನ್ನಾಗಿ ಮಾಡಲು ಪ್ರೋತ್ಸಾಹಿಸುವ ಅನೇಕ ವಾಕ್ಯಗಳನ್ನು ಪವಿತ್ರ ಖುರ್‌ಆನಿನಲ್ಲಿ ಕಾಣಬಹುದಾಗಿದೆ. ಗುಲಾಮರನ್ನು ವಿಮೋಚಿಸುವುದು ಅತ್ಯಂತ ದೊಡ್ಡ ಪುಣ್ಯ ಕರ್ಮವೆಂದು ಖುರ್‌ಆನ್ ಹೇಳುತ್ತದೆ. ಗುಲಾಮರನ್ನಿಟ್ಟುಕೊಂಡಿರುವವರು, ಅವರೊಡನೆ ಅತ್ಯಂತ ಕರುಣೆಯಿಂದಲೂ ಉದಾರತೆಯಿಂದಲೂ ವರ್ತಿಸಬೇಕೆಂದು ಖುರ್‌ಆನ್ ನಿರ್ದೇಶಿಸುತ್ತದೆ. (4 : 39). ಪೈಗಂಬರರು ಇಸ್ಲಾಮಿಕ ಅಧ್ಯಾಪನೆಗಳ ಅತ್ಯಂತ ಉತ್ತಮ ಮಾದರಿಯಾಗಿದ್ದರು. ತಾನು ಪ್ರಬೋಧಿಸಿದ್ದನ್ನೆಲ್ಲಾ ಅವರು ಪ್ರಯೋಗದಲ್ಲಿ ತೋರಿಸಿದರು ತನ್ನ ಅಧೀನದಲ್ಲಿ ಬಂದ ಎಲ್ಲಾ ಗುಲಾಮರನ್ನೂ ಸ್ವತಂತ್ರರನ್ನಾಗಿ ಮಾಡಿದ ಆ ಮನುಷ್ಯಸ್ನೇಹಿಯನ್ನು ಸೈದ್‌ನಂತಹ ಓರ್ವ ಗುಲಾಮ ಬಿಟ್ಟು ಅಗಲಲು ಇಷ್ಟಪಡದಿದ್ದುದರಲ್ಲಿ ಆಶ್ಚರ್ಯಪಡಬೇಕಾಗಿಲ್ಲ. ಪೈಗಂಬರರು ಹೀಗೆ ಉಪದೇಶಿಸಿದ್ದರು.

"ನೀವು ತಿನ್ನುವುದನ್ನು ಗುಲಾಮರಿಗೂ ಕೊಡಿರಿ. ನೀವು ಧರಿಸುವಂತಹ ವಸ್ತ್ರಗಳನ್ನೇ ಅವರಿಗೂ ಧರಿಸಲು ನೀಡಿರಿ. ಅವರಿಗೆ ಮಾಡಲಸಾಧ್ಯವಾದ ಕೆಲಸಗಳನ್ನು ಅವರಿಗೆ ಕೊಡಬಾರದು.''

ಮುಹಮ್ಮದ್ ಪೈಗಂಬರರು ಆ ಗುಲಾಮರ ನಿಕಟ ಸಂಬಂಧಿಯೂ ಅವರ ವಿಮೋಚಕನೂ ಆಗಿದ್ದರು. ಈ ಕುರಿತು ನಿಷ್ಪಕ್ಷ ಅಧ್ಯಯನವನ್ನು ನಡೆಸಿದ ಕ್ರೈಸ್ತ ವಿದ್ವಾಂಸರ ಅಭಿಪ್ರಾಯವೇನೆಂದು ನೋಡಿರಿ:

"ಗುಲಾಮರನ್ನು ಕುಟುಂಬದ ಒಂದು ಅಂಗವಾಗಿ ಗಣಿಸಲ್ಪಡುತ್ತದೆ. ಔದಾರ್ಯದಿಂದಲೂ ವಾತ್ಸಲ್ಯದಿಂದ ಕೂಡಿಯೂ ಗುಲಾಮರೊಡನೆ ವರ್ತಿಸಲಾಗುತ್ತದೆ. ಗುಲಾಮರೊಡನೆ ದಯಾಪರವಾಗಿಯೂ ಉದಾರತೆಯಿಂದಲೂ ವರ್ತಿಸಲು ಖುರ್‌ಆನ್ ಆಜ್ಞಾಪಿಸಿ ಗುಲಾಮರನ್ನು ವಿಮುಕ್ತರನ್ನಾಗಿ ಮಾಡಲು ಪ್ರೋತ್ಸಾಸಿದೆ." (Encyclopaedia Brittanica).

ಹೀಗೆ ಖುರ್‌ಆನ್ ಮತ್ತು ಪೈಗಂಬರರಿಂದ ಸ್ಪಷ್ಟವಾದ ಭಾಷೆಯಲ್ಲಿ ಗುಲಾಮಗಿರಿ ಸಂಪ್ರದಾಯವು ವಿರೋಧಿಸಲ್ಪಟ್ಟಿದೆ. ಯಾರಿಗೂ ಈ ಸತ್ಯವನ್ನು ನಿಷೇಧಿಸಲು ಸಾಧ್ಯವಿಲ್ಲ.

ಸಂಪೂರ್ಣವಾದ ವಿಮೋಚನೆಯನ್ನು ನೀಡುತ್ತದೆ ಎಂಬುದಾಗಿದೆ ಖುರ್‌ಆನಿನ ಒಂದು ಮಹತ್ವ. ಪವಿತ್ರ ಖುರ್‌ಆನ್ ಗುಲಾಮಗಿರಿ ಸಂಪ್ರದಾಯವನ್ನು ವಿರೋಧಿಸುವ ಜೊತೆಗೆ ಅಂದು ಗುಲಾಮರಾಗಿ ಕಳೆಯುತ್ತಿದ್ದವರೊಡನೆ ಹೇಗೆ ವರ್ತಿಸಬೇಕೆಂದು ನಿರ್ದೇಶಿಸಿದೆ. ಅವರನ್ನು ಅಧೀನದಲ್ಲಿಡುವವರು ತಾವು ತಿನ್ನುವ ಹಾಗೂ ಧರಿಸುವ ಅದೇ ರೀತಿಯಲ್ಲಿ ಅವರಿಗೂ ತಿನ್ನಿಸಬೇಕೆಂದೂ, ಧರಿಸಲು ನೀಡಬೇಕೆಂದೂ ಖುರ್‌ಆನ್ ಆಜ್ಞಾಪಿಸಿದೆ.

ಗುಲಾಮರ ಪ್ರಾಯೋಗಿಕ ವಿಮೋಚನೆಯನ್ನು ಇಸ್ಲಾಂ ಮೊದಲಿಗೆ ಉದ್ದೇಶಿಸಿತ್ತು. ಒಂದೇ ಪೆಟ್ಟಿಗೆ ಒಂದು ದೊಡ್ಡ ಜನವಿಭಾಗವನ್ನು ಸ್ವತಂತ್ರರನ್ನಾಗಿ ಮಾಡಿ ಬಿಡುವ ಮೊದಲು ಕ್ರಮಬದ್ಧವಾದ ವಿಮೋಚನೆ ಅವರಿಗೆ ಅಗತ್ಯವಿತ್ತು. ಇಸ್ಲಾಮಿನ ಈ ರೀತಿ ತುಂಬಾ ವಿವೇಕಯುತವಾಗಿತ್ತೆಂಬುದನ್ನು ತಿಳಿಕೊಳ್ಳಲು ಕಷ್ಟವಿಲ್ಲ. ಪೈಗಂಬರರ ಆವಿರ್ಭಾವಕ್ಕೆ ಎಷ್ಟೋ ಮೊದಲು ಗುಲಾಮಗಿರಿ ಪದ್ಧತಿಯು ಅರೇಬಿಯಾದಲ್ಲಿ ಬೇರುಬಿಟ್ಟಿತ್ತು. ಅದು ಸಾಮೂಹಿಕ ವ್ಯವಸ್ಥೆಯ ಅವಿಭಾಜ್ಯವಾದ ಒಂದು ಸಂಪ್ರದಾಯವಾಗಿ ಮಾರ್ಪಟ್ಟಿತ್ತು. ಈ ವ್ಯವಸ್ಥೆಯನ್ನು ಪಕ್ಕನೆ ನಿಲ್ಲಿಸುವುದು ಅಂದಿನ ಸಾಮೂಹಿಕ ಕ್ರಮದಲ್ಲಿ ತುಂಬಾ ಅಪಾಯಕಾರಿಯಾದ ಪರಿಣಾಮಗಳನ್ನು ಉಂಟುಮಾಡಲು ಶಕ್ತವಾಗಿತ್ತು. ಧಾರ್ಮಿಕವಾಗಿಯೂ ಸಾಮೂಹಿಕವಾಗಿಯೂ ಅದು ಹಲವು ದುಷ್ಪರಿಣಾಮಗಳಿಗೆ ಎಡೆ ಕೊಡುತಿತ್ತು. ಅಜ್ಞರೂ ಸಾಂಸ್ಕಾರಿಕವಾಗಿ ಅಧಃಪತಿಸಿದವರೂ ಆಗಿದ್ದ ಲಕ್ಷಗಟ್ಟಲೆ ಗುಲಾಮರು–ಅವರಲ್ಲಿ ಹೆಚ್ಚಿನವರು ಅಂತಹವರು–ನಿರಾಧಾರರೂ ನಿರ್ಗತಿಕರೂ ಆಗಲು ಅದು ಕಾರಣವಾಗುತಿತ್ತು. ಅವರಲ್ಲಿ ಬಹುಪಾಲು ಜನರು ಸ್ವತಂತ್ರ ಜೀವನ ನಿರ್ವಹಿಸಲು ನಿಶ್ಶಕ್ತರಾಗಿದ್ದರು. ಆ ನಿಮಿತ್ತ, ಅವರಲ್ಲಿ ದೊಡ್ಡ ಪಾಲು ಅಲೆದು ತಿರುಗುವವರೂ ಯಾಚಕರೂ ಅಪರಾಧಿಗಳೂ ಆಗಿ ಮಾರ್ಪಡುವುದಾಗಿತ್ತು ಅವರ ಫಲ. ಈ ವಸ್ತುತೆಯನ್ನು ತಿಳಿದು

ಕೊಂಡು, ಗುಲಾಮಗಿರಿ ಪದ್ಧತಿಯನ್ನು ನಿರೋಧಿಸಿ, ಗುಲಾಮರನ್ನು ವಿಮೋಚಿಸಲು ಪ್ರೋತ್ಸಾಹಿಸುವ ಜೊತೆಗೆ, ಆ ಗುಲಾಮರು ಎದುರಿಸಬೇಕಾಗಿದ್ದ ಸ್ವತಂತ್ರವಾದ ಹೊಸ ವ್ಯವಸ್ಥೆಗಳೊಂದಿಗೆ ಹೊಂದಿ ಬಾಳಲು ಅವರನ್ನು ಪ್ರಾಪ್ತರನ್ನಾಗಿ ಮಾಡಲು ಸಹಾಯಕವಾಗುವ ರೀತಿಯಲ್ಲಿ ತಮ್ಮ ಅಧೀನದಲ್ಲಿರುವ ಗುಲಾಮರೊಡನೆ ವರ್ತಿಸಬೇಕಾದದ್ದು ಮುಸ್ಲಿಮರ ಕರ್ತವ್ಯವೆಂದು ಖುರ್‌ಆನ್ ಆಜ್ಞಾಪಿಸಿದೆ. ಈ ಸಂಗತಿಯನ್ನು ವಿವರಿಸುತ್ತಾ ಪೈಗಂಬರರು ಹೀಗೆ ನುಡಿದಿರುವರು:

"ಅವರು ಕರ ಕುಶಲತೆ ಇರುವವರೆಂದು ನೀವು ಕಂಡರೆ, ಸಮಾಜದಲ್ಲಿ ಒಂದು ಭಾರವಾಗದ ರೀತಿಯಲ್ಲಿ ಅವರಿಗೆ ಸ್ವಂತ ಜೀವಿಸಲು ಸಾಧ್ಯವಾಗುವ ಸವಲತ್ತುಗಳನ್ನು ಒದಗಿಸಿಕೊಡಿರಿ."

ಕೆಳಗಿನ ಖುರ್‌ಆನ್ ವಾಕ್ಯದ ಒಂದು ವಿಶದೀಕರಣ ಅಥವಾ ವ್ಯಾಖ್ಯಾನವೆಂಬಂತೆ ಪೈಗಂಬರರು ಹಾಗೆ ಹೇಳಿದುದು. ಖುರ್‌ಆನ್ ಹೇಳುತ್ತದೆ:

"ವಿಮೋಚನೆಯು ಕರಾರಿಗೆ ನಿಮ್ಮ ಗುಲಾಮರು ಇಚ್ಛಿಸುವರಾದರೆ ಅವರಿಗೆ ಅದನ್ನು ಮಾಡಿಕೊಡಿರಿ· ನಿಮಗೆ ಅಲ್ಲಾಹು ನೀಡಿ ಅನುಗ್ರಹಿಸಿದ ಸಂಪತ್ತಿನ ಒಂದು ಭಾಗವನ್ನು ಅವರಿಗೆ ನೀಡಿರಿ." (24 : 33)

ಗುಲಾಮರ ವಿಮೋಚನೆಯನ್ನು ಸಂಬಂಧಿಸಿ ಖುರ್‌ಆನ್ ಎರಡು ಸಂಗತಿಗಳನ್ನು ಕಲಿಸುತ್ತದೆ. ಒಂದು: ಓರ್ವ ಗುಲಾಮ ಸಮಾಜದಲ್ಲಿ ಉಪಕಾರಿಯಾದ ಒಂದಂಶವಾಗಿ ಮಾರ್ಪಡಲು ಶಕ್ತನಾಗಿರಬೇಕಾಗಿದೆ. ಎರಡು: ಯಜಮಾನರು ತನ್ನ ಸಂಪತ್ತಿನ ಒಂದು ಭಾಗವನ್ನು ಗುಲಾಮನಿಗೆ ನೀಡಿ ಮಾನ್ಯವಾದ ಓರ್ವ ಪೌರನಿಗೆ ತಕ್ಕುದಾದ ಒಂದು ಹೊಸ ಜೀವನ ಮಾರ್ಗವನ್ನು ಕಂಡು ಹಿಡಿಯಲು ಅವನಿಗೆ ನೆರವಾಗಬೇಕು.

ಇಸ್ಲಾಮಿನ ಕುರಿತು ನಿಷ್ಪಕ್ಷಪಾತವಾಗಿ ಅಧ್ಯಯನ ಮಾಡುವ ಓರ್ವನಿಗೆ ಅದರ ಮಹತ್ತಾದ ಈ ಅಧ್ಯಾಪನೆಯ ಪ್ರಾಯೋಗಿಕ ಸೌಂದರ್ಯವನ್ನು ಅಂಗೀಕರಿಸದಿರಲು ನಿರ್ವಾಹವಿಲ್ಲ.

(ಸ್ಕಾಟ್‌ಲ್ಯಾಂಡಿನ ಅಹ್ಮದಿಯಾ ಮಿಶನರಿಯಾದ ಬಶೀರ್ ಅಹ್ಮದ್ ಓರ್ಚರ್ಡ್ ಬರೆದ ಲೇಖನದಿಂದ ಆಯ್ದ ಭಾಗಗಳ ಅನುವಾದ.— ಸಂ.)


Phone: 74464 P. P.

ಉತ್ತಮ ತರದ ಮರಗೆಣಸಿನ ಚಿಪ್ಸ್ ಮತ್ತು ಹಿಟ್ಟಿನ ರಖಂ ವ್ಯಾಪಾರಸ್ಥರು

**Kessee Trading Corporation**

Dealers in: TOPICA CHIPS AND FLOUR,

9/135, GUNNY STREET, CALICUT - 673001.

# — ಅಹ್ಮದಿಯಾ ಸಂದೇಶ —

ಲೇಖಕ: ಸಿದ್ದೀಖ್ ಅಶ್ರಫಲಿ H. A.

"ಅಹ್ಮದಿಯತ್" ಎಂಬುದು ಯಾವುದೇ ಹೊಸ ಮತದ ಹೆಸರಲ್ಲ. ಅಹ್ಮದಿಯತ್ ಯಥಾರ್ಥ ಇಸ್ಲಾಮಿನ ಇನ್ನೊಂದು ಹೆಸರಾಗಿದೆ. ಈಗಿನ ಕಾಲದಲ್ಲಿ ಇಸ್ಲಾಮಿನ ಹೆಸರೆತ್ತುವಾಗ ಜನರ ಹೃದಯದಲ್ಲಿ ಉಂಟಾಗುವ ಸ್ವರೂಪವು ಬಹಳ ಭಯಂಕರ ಮತ್ತು ಅಸಹ್ಯವಾಗಿದೆ. ಅವರ ದೃಷ್ಟಿಯಲ್ಲಿ ಇಸ್ಲಾಂ ಯಾವುದೋ ಒಂದು ಅನಾಗರಿಕ ಮತವಾಗಿದೆ; ವಿನಯ, ಸದಾಚಾರ ಮತ್ತು ವಿವೇಕಕ್ಕೆ ಅದರಲ್ಲಿ ಸ್ಥಾನವಿಲ್ಲ. ಇಸ್ಲಾಮನ್ನು ನಂಬುವವರಲ್ಲಿ ಸಹ ಇಸ್ಲಾಂ ಖಡ್ಗ, ಬಲಾತ್ಕಾರ ಮತ್ತು ಹಿಂಸೆಯಿಂದ ಹಬ್ಬಿದುವೆಂದೂ ಇತರ ಜಾತಿಗಳೊಡನೆ ಯಾವುದೇ ರೀತಿಯ ಸೌಹಾರ್ದ ಪಾಪಕರವೆಂದೂ ಗ್ರಹಿಸುವವರಿದ್ದಾರೆ. ಯುದ್ಧ ಮಾಡಿ ಅಥವಾ ಬಲಾತ್ಕಾರದಿಂದ ಮುಸ್ಲಿಮರನ್ನಾಗಿ ಮಾಡುವುದು ಅವರ ದೃಷ್ಟಿಯಲ್ಲಿ ನ್ಯಾಯವಾಗಿದೆ.

ಇಂತಹ ಭಯಾನಕ ತತ್ವಗಳಿಗೂ ಯಥಾರ್ಥ ಇಸ್ಲಾಮಿಗೂ ಯಾವುದೇ ಸಂಬಂಧವಿಲ್ಲ. ಹದಿನಾಲ್ಕು ನೂರು ವರ್ಷಗಳ ಮೊದಲು ಪವಿತ್ರ ಮುಹಮ್ಮದ್ ಪೈಗಂಬರರು ಲೋಕದ ಮುಂದಿರಿಸಿದ ಯಥಾರ್ಥ ಇಸ್ಲಾಮನ್ನೇ ಅಹ್ಮದಿಯರು ಲೋಕದ ಮುಂದಿರಿಸುತ್ತಾರೆ. ಆ ಇಸ್ಲಾಮನ್ನು ಮುಸ್ಲಿಮರು ಮರೆತಿರುವರು. ಆ ಯಥಾರ್ಥ ಇಸ್ಲಾಮಿನ ಉಪದೇಶಗಳನ್ನು ನಿಷ್ಕಲ್ಮಷ ಹೃದಯದಿಂದ ಪಠಿಸುವವನು ಅದರಿಂದ ಆಕರ್ಷಿತನಾಗಿ ಇಸ್ಲಾಮಿನ ಮಹತ್ವವನ್ನು ಸಮ್ಮತಿಸುವನೆಂಬುದು ಖಂಡಿತ. ಆ ಉಪದೇಶಗಳಲ್ಲಿ ಕೆಲವನ್ನು ಸಂಕ್ಷಿಪ್ತವಾಗಿ ನಿಮ್ಮ ಮುಂದಿರಿಸುತ್ತೇನೆ.

1. ಇಸ್ಲಾಮಿನ ಪ್ರಧಾನ ಉಪದೇಶಗಳಲ್ಲಿ ಒಂದು, ಸಕಲ ಲೋಕ ಪರಿಪಾಲಕನಾದ ಒಬ್ಬ ದೇವರಲ್ಲಿ ಪ್ರತಿಯೊಬ್ಬ ಮುಸ್ಲಿಮನು ವಿಶ್ವಾಸವಿಡಬೇಕೆಂದಾಗಿದೆ. ಪವಿತ್ರ ಖುರ್‌ಆನಿನಲ್ಲಿ ಉಲ್ಲೇಖಿಸಲಾದ ಪ್ರಥಮ ವಿಷಯವೇ ಇದಾಗಿದೆ: "ಎಲ್ಲಾ ಸ್ತುತಿಗಳಿಗೆ ಅರ್ಹನಾಗಿರುವುದು ಸಕಲ ಲೋಕಗಳ ಪರಿಪಾಲಕನಾದ ಅಲ್ಲಾಹು ಮಾತ್ರವಾಗಿರುವನು". ಮನುಷ್ಯರು ಯಾವುದೇ ಬಣ್ಣದವರಾಗಿರಲಿ, ಯಾವುದೇ ಕುಲದವರಾಗಿರಲಿ, ಯಾವುದೇ ಕಾಲದವರಾಗಿರಲಿ ಎಲ್ಲರೂ ಅವನ ದಾಸರು. ಎಲ್ಲಾ ಮನುಷ್ಯರು ಅಲ್ಲಾಹುವಿನ ಕುಟುಂಬದ ಸದಸ್ಯರೆಂದೂ, ಇನ್ನೊಬ್ಬನ ಜೊತೆ ಒಳ್ಳೆಯ ಸಂಬಂಧ ಸ್ಥಾಪಿಸುವವನು ಅಲ್ಲಾಹುವಿನ ದೃಷ್ಟಿಯಲ್ಲಿ ಉತ್ತಮನೆಂದೂ ಮುಹಮ್ಮದ್ ಪೈಗಂಬರರು ನುಡಿದಿರುವರು.

2. ಇಸ್ಲಾಮ್ ಕಲಿಸಿರುವ, ಆದರೆ ಇಂದಿನ ಮುಸ್ಲಿಮರು ಮರೆತಿರುವ, ಮತ್ತು ಅಹ್ಮದಿಯರು ಪುನಃ ಲೋಕದ ಮುಂದಿರಿಸಿರುವ ಇನ್ನೊಂದು ಉಪದೇಶವೇನೆಂದರೆ ಲೋಕದಲ್ಲಿ ದೇವರ ದೂತರು ಬಂದಿರದ ಒಂದು ಜನಾಂಗವೂ ಇಲ್ಲವೆಂಬ ತತ್ವವಾಗಿದೆ. ಬೇರೆ ಜನಾಂಗಗಳಿಗೂ ದೇವರ ದೂತರು ಬಂದಿರುವರೆಂಬ ಯಥಾರ್ಥತೆಯನ್ನು ಗ್ರಹಿಸಿದಾಗ ಇತರ ಜನಾಂಗಗಳ ಕುರಿತು ನಮ್ಮಲ್ಲಿ ಒಂದು ಪ್ರೇಮ ಮತ್ತು ಜಾಗತಿಕ ಬಾಂಧವ್ಯ ಉಂಟಾಗುತ್ತದೆ, ಮತ್ತು ಈ ಪ್ರೇಮ ಕೇವಲ ಕಪಟತೆಯಿಂದ ಕೂಡಿರದೆ, ಪೂರ್ಣ ವಿಶ್ವಾಸದ ಆಧಾರದ ಮೇಲೆ ನೆಲೆಗೊಂಡದ್ದಾಗುವುದು. ಯಾವ ದೇವರು ನಮಗೆ ಪ್ರವಾದಿಗಳನ್ನೂ ಅವತಾರಗಳನ್ನೂ ಕಳುಹಿಸಿದನೋ ಅದೇ ದೇವರು ಭೂಲೋಕದ ಇತರ ಭಾಗಗಳ ಜನರಿಗೆ ಸಹ ಪ್ರವಾದಿಗಳನ್ನೂ, ಅವತಾರಗಳನ್ನೂ ಕಳುಹಿಸಿದನು. ಹೀಗಿರುವಾಗ ನಮಗೂ ಅವರಿಗೂ ವ್ಯತ್ಯಾಸವೇನು? ಎಲ್ಲರೂ ನಮ್ಮ ಸಹೋದರರು. ಪವಿತ್ರ ಖುರ್‌ಆನ್‌ನ ಈ ಪಾಠಗಳಿಗನುಸಾರ

ವಾಗಿ ಅಹ್ಮದಿಯ ಸಂಘಟನೆಯ ಸ್ಥಾಪಕರು ಅಹ್ಮದಿಯ ರಿಗೆ ಈ ರೀತಿ ಉಪದೇಶಿಸಿರುವರು:— ಎಲ್ಲೆಲ್ಲಾ ಜನರು ತಮ್ಮ ಪ್ರವಾದಿಯೆಂದೂ ಅವತಾರವೆಂದೂ ಯಾರನ್ನೆಲ್ಲಾ ಮರ್ಯಾದಿಸುತ್ತಾರೋ ಅಂಥಹವರನ್ನು ಅಹ್ಮದಿಯರು ಸಹ ಪ್ರವಾದಿಗಳ ರೀತಿಯಲ್ಲಿ ಆದರಿಸಬೇಕು. ಭಾರತದಲ್ಲಿ ಅವತರಿಸಿದ ಶ್ರೀ ಕೃಷ್ಣ ಮತ್ತು ಶ್ರೀ ರಾಮರನ್ನು ದೇವರ ಪ್ರವಾದಿಗಳೆಂದು ಪರಿಗಣಿಸಿ ಆದರಿಸಬೇಕೆಂದು ಅಹ್ಮದಿಯ ಸಂಘಟನೆಯ ಸ್ಥಾಪಕರು ಉಪದೇಶಿಸಿರುವರು.

3. ಇಸ್ಲಾಂ ಉಪದೇಶಿಸುವ, ಆದರೆ ಮುಸ್ಲಿಮರು ಮರೆತಿರುವ, ಮತ್ತು ಅಹ್ಮದಿಯ ಸಂಘಟನೆಯ ಸ್ಥಾಪಕರು ಲೋಕದ ಮುಂದೆ ಪುನಃ ಇರಿಸಿದ ಇನ್ನೊಂದು ತತ್ವವು ಜಾತೀಯ ಸೌಹಾರ್ದತೆಯಾಗಿದೆ. ಪವಿತ್ರ ಖುರ್-ಅನ್ ಸ್ಪಷ್ಟವಾಗಿ ಸಾರುತ್ತದೆ: "ಮತದ ವಿಷಯದಲ್ಲಿ ಯಾವುದೇ ಬಲಾತ್ಕಾರವಿಲ್ಲ.'' ಇದೇ ರೀತಿ ಪವಿತ್ರ ಖುರ್-ಆನ್ ಇನ್ನೊಂದೆಡೆಯಲ್ಲಿ ಉಪದೇಶಿಸುತ್ತದೆ: " ಯಾವುದನ್ನಾದರೂ ಸ್ವೀಕರಿಸುವುದಕ್ಕೂ, ಅಥವಾ ನಿಷೇಧಿಸುವುದಕ್ಕೂ ಮನುಷ್ಯನಿಗೆ ಅಧಿಕಾರವಿದೆ.'' ಮತವು ಮನುಷ್ಯನ ಹೃದಯವನ್ನು ಸಂಬಂಧಿಸಿದೆ. ಅಲ್ಲಿ ಶಕ್ತಿ ಅಥವಾ ಬಲಾತ್ಕಾರಕ್ಕೆ ಸ್ಥಾನವಿಲ್ಲ. ಬಲಾತ್ಕಾರದಿಂದ ಯಾರ ಹೃದಯವನ್ನೂ ಬದಲಾಯಿಸಲು ಸಾಧ್ಯವಿಲ್ಲ. ಇಸ್ಲಾಮಿನ ಈ ಉಪದೇಶವನ್ನನುಸರಿಸಿ ಮುಹಮ್ಮದ್ ಪೈಗಂಬರರು ವರ್ತಿಸಿ ತೋರಿಸಿರುವರು.

ಅಹ್ಮದಿಯ ಸಂಘಟನೆಯ ಸ್ಥಾಪಕರು ಪುನಃ ಲೋಕದ ಮುಂದೆ ಈ ತತ್ವಗಳನ್ನಿರಿಸಿದರು. ಮತವು ಹೃದಯಕ್ಕೆ ಸಂಬಂಧಿಸಿದೆಯೆಂದೂ ಇದರಲ್ಲಿ ಬಲಾತ್ಕಾರವಿರಬಾರದೆಂದೂ ಹೇಳಿದರು. ನಿಮಗೆ ಜನರು ಯಾವುದಾದರೂ ಮಾತನ್ನು ಸ್ವೀಕರಿಸುವಂತೆ ಮಾಡಬೇಕಾದರೆ ಪ್ರೀತಿ ಮತ್ತು ಸ್ನೇಹದಿಂದ ಅವರಿಗೆ ತಿಳುವಳಿಕೆ ಕೊಡಿರಿ. ನಿಮ್ಮ ಉದ್ದೇಶವನ್ನು ಆಧಾರಗಳಿಂದ ವ್ಯಕ್ತಗೊಳಿಸಿ ಜನರು ಸ್ವೀಕರಿಸುವಂತೆ ಮಾಡಿರಿ.'' ಲೋಕವು ಈ ತತ್ವ ಸ್ವೀಕರಿಸಿದರೆ ಮತ್ತು ಇಸ್ಲಾಮಿನ ಈ ಪ್ರಿಯ ಪಾಠಗಳಂತೆ ನಡೆಯಲೆತ್ನಿಸಿದರೆ ಲೋಕದಲ್ಲಿ ಮತದ ಹೆಸರಿನಲ್ಲಿ ಜಗಳ ಉಂಟಾಗಲಾರದು. ಇದು ಬರೇ ಬಾಯಿ ಮಾತಿನ ವಾದವಲ್ಲ. ಅಹ್ಮದಿಯತ್ತಿನ ಚರಿತ್ರೆ ಗೊತ್ತಿರುವವರಿಗೆಲ್ಲಾ ತಿಳಿದಿದೆ. ಅಹ್ಮದಿಯರು ಈ ತತ್ವವನ್ನು ಕಟ್ಟುನಿಟ್ಟಿನಿಂದ ಪಾಲಿಸಿರುವರು. ಅವರು ಜಾತೀಯ ಗಲಭೆಗಳಲ್ಲಿ ಎಂದೂ ಭಾಗವಹಿಸಿಲ್ಲ. ಅಹ್ಮದಿಯರು ಯಾವಾಗಲೂ ಎಲ್ಲಾ ಮತಗಳವರ ಮಧ್ಯೆ ಪ್ರೀತಿ ಮತ್ತು ಸ್ನೇಹದ ವಾತಾವರಣ ನೆಲೆನಿಲ್ಲುವಂತೆ ಸದಾ ಶ್ರಮಿಸಿದರು.

4. ಇಸ್ಲಾಮಿನ ಪಾಠಗಳ ಪ್ರಕಾಶದಲ್ಲಿ ಅಹ್ಮದಿಯತ್ ಜನರ ಮಧ್ಯೆ ಇರಿಸಿದ ಇನ್ನೊಂದು ತತ್ವ ಒಂದು ಜೀವಂತ ದೇವರ ಸ್ವರೂಪವಾಗಿದೆ. ಈಗ ಇತರರು ಮಾತ್ರವಲ್ಲ ಮುಸ್ಲಿಮರು ಸಹ ದೇವರ ಕುರಿತು ಸರಿಯಾದ ಅಭಿಪ್ರಾಯ ಹೊಂದಿಲ್ಲ. ಅವರ ಅಭಿಪ್ರಾಯ ಪ್ರಕಾರ ದೇವರ ಸ್ಥಾನ ಬರೇ ಕತೆಗಳಿಗೆ ಸೀಮಿತವಾಗಿದೆ. ಅಹ್ಮದಿಯತ್ ತೋರಿಸಿರುವುದೇನೆಂದರೆ ದೇವರಿಗೆ ನಮ್ಮ ಜೀವನದೊಂದಿಗೆ ಸಮೀಪದ ಸಂಬಂಧವಿದೆಯೆಂದಾಗಿದೆ. ಮನುಷ್ಯನ ಅಭಿವೃದ್ಧಿಯೊಂದಿಗೆ ನಿಕಟ ಸಂಬಂಧವಿದೆ. ಯಾವ ಪ್ರಕಾರ ಮನುಷ್ಯನ ಶಾರೀರಿಕ ಅವಶ್ಯಕತೆಗಳಿಗೆ ಎಲ್ಲಾ ಕಾಲಗಳಲ್ಲೂ ಸಾಮಾಗ್ರಿಗಳನ್ನು ಏರ್ಪಡಿಸಿದನೋ ಹಾಗೆಯೇ ಆತನ ಆತ್ಮದ ತೃಷೆಯನ್ನು ತಣಿಸಲಿಕ್ಕಾಗಿಯೂ ಸಾಮಾಗ್ರಿಗಳನ್ನು ದೇವರು ಏರ್ಪಡಿಸಿರುವನು. ಲೋಕದಲ್ಲಿ ಯಾವಾಗೆಲ್ಲಾ ಮತೀಯವಾದ ಭ್ರಷ್ಟಾಚಾರಗಳು ಉಂಟಾಗಿ ಮತದ ಅಧ್ಯಾಪನೆ ಮತ್ತು ಯಥಾರ್ಥತೆಯಿಂದ ದೂರ ಸರಿದಾಗ, ದೇವರ ಉಪದೇಶಗಳನ್ನು ಜನರು ಮರೆತಾಗ ದೇವರು ಅವರಲ್ಲಿ ತನ್ನ ನಬಿ ಮತ್ತು ಅವತಾರಗಳನ್ನು ಕಳುಹಿಸುತ್ತಾ ಇದ್ದನು. ಅವರ ಮುಖಾಂತರ ಲೋಕದಲ್ಲಿ ಶಾಂತಿ ಮತ್ತು ಹೃದಯದ ತೃಪ್ತಿಯ ಸಾಧನಗಳನ್ನು ಉಂಟುಮಾಡುತ್ತಾ ಇದ್ದಾನೆ.

ಜನರ ಸ್ವಭಾವಗಳು ಬಹಳ ಹಾಳಾಗಿರುವ ಮತ್ತು ಜನರು ಪ್ರಾಪಂಚಿಕ ಸುಖಗಳನ್ನು ಮಾತ್ರ ಅಪೇಕ್ಷಿಸುತ್ತಿರುವ ಈ ಕಲಿಯುಗದಲ್ಲಿ ಜನರನ್ನು ಸರಿಯಾದ ರಸ್ತೆಯಲ್ಲಿ ಕೊಂಡು ಹೋಗಲು ಮತ್ತು ದೇವರ ಕುರಿತು ಸರಿಯಾದ ವಿಶ್ವಾಸ ಗಳಿಸಲು ಮತ್ತು ಆವನ ಜೊತೆ ಸ್ನೇಹದ ಬಂಧವನ್ನು ಸ್ಥಾಪಿಸಲು ತನ್ನನ್ನು ದೇವರು ನೇಮಿಸಿರುವುದಾಗಿ ಅಹ್ಮದಿಯ ಸಂಘದ ಸ್ಥಾಪಕರು ವಾದಿಸಿದರು. ತನ್ನೊಡನೆ ದೇವರು ಮಾತನಾಡುವುದಾಗಿ ಅವರು ಹೇಳಿದರು: "ದೇವರು ನನ್ನನ್ನು ಸ್ನೇಹಿ

ಸುತ್ತಾನೆ. ನನಗೆ ಭವಿಷ್ಯದ ಮಾತುಗಳನ್ನು ತಿಳಿಸು ತ್ತಾನೆ. ಇದರಿಂದ ನನ್ನೊಡನೆ ದೇವರ ಬಂಧ ಯಾವ ರೀತಿ ಇದೆಯೆಂದು ತಿಳಿಯಬಹುದು''. ದೇವರು ದೂರ ಇಲ್ಲ ಬಹಳ ಹತ್ತಿರವೇ ಇರುವನೆಂದು ಅವರು ತೋರಿಸಿ ಕೊಟ್ಟರು. ದೇವರಿಚ್ಛಿಸುವುದೇನೆಂದರೆ ಮನುಷ್ಯನು ದೇವರನ್ನು ಸ್ನೇಹಿಸಿ ದೇವರು ಮನುಷ್ಯನನ್ನು ಸ್ನೇಹಿಸು ವಂತೆ ಮಾಡಬೇಕೆಂದಾಗಿದೆ. ದೇವರು ಇಚ್ಛಿಸುವುದೇ ನೆಂದರೆ ಜನರು ಆತನನ್ನು ಕರೆಯಲಿ, ಅದಕ್ಕೆ ಅವನು ಉತ್ತರಕೊಡುವನು. ಅಹ್ಮದಿಯಾ ಸಂಘಟನೆಯ ಸ್ಥಾಪ ಕರ ಉದ್ದೇಶ ದೇವರನ್ನು ಸ್ನೇಹಿಸುವಂತಹ ಮತ್ತು ತಮ್ಮತಮ್ಮೊಳಗೆ ಸ್ನೇಹದಿಂದಿರುವ ಜನರಿರುವ ಒಂದು ಪ್ರಪಂಚವನ್ನು ಉಂಟುಮಾಡುವುದಾಗಿದೆ. ಅವರ ಉದ್ದೇಶ ಲೋಕದಲ್ಲಿ ಉತ್ತಮ ನಡೆವಳಿಕೆಗಳಿರುವ ಉತ್ತಮ ರೀತಿ ನೀತಿಗಳನ್ನು ಬಲ್ಲ ಸದಾಚಾರ ಸಂಪನ್ನ ರಾದ ಲೋಕದಲ್ಲಿ ಶಾಂತಿ ಮತ್ತು ಸಮಾಧಾನ ಹಬ್ಬು ವಂತಹ ಜನರಿರುವ ಸಂಘ ಸ್ಥಾಪನೆಯಾಗಿದೆ.

ಈ ಉತ್ತಮ ತತ್ವಗಳ ಫಲವಾಗಿ ಅಹ್ಮದಿಯತ್ ದಿನಂಪ್ರತಿ ಅಭಿವೃದ್ಧಿ ಹೊಂದುತ್ತಾ ಇದೆ. ಮತ್ತು ಲೋಕದ ಮೂಲೆ ಮೂಲೆಗಳಲ್ಲಿ ಅಹ್ಮದಿಯತ್ತಿನ ಸಂದೇ ಶ ತಲುಪಿದೆ. ಹಿಂದೂಸ್ಥಾನದ ಒಂದು ಚಿಕ್ಕ ಗ್ರಾಮ ವಾಗಿದ್ದ ಖಾದಿಯಾನ್‌ನಿಂದ ಹೊರಟ ಶಬ್ದವು ಇಂದು ಒಂದು ಕೋಟಿ ಜನರ ಶಬ್ದವಾಗಿ ಮೊಳಗುತ್ತಿದೆ.

ಇಸ್ಲಾಮಿನ ಸ್ಥಾಪಕರಾದ ಮುಹಮ್ಮದ್ ಪೈಗಂ ಬರರು ಹದಿನಾಲ್ಕುನೂರು ವರ್ಷಗಳ ಮೊದಲು ಭವಿಷ್ಯ ನುಡಿದಿದ್ದರು: 'ಒಂದು ಕಾಲಬರುವುದು ಆಗ ಮುಸಲ್ಮಾ ನರು ಖುರ್-ಆನನ್ನು ಮರೆಯುವರು ಮತ್ತು ಮುಸಲ್ಮಾ ನರು ಬರೇ ನಾಮ ಮಾತ್ರ ಮುಸ್ಲಿಮರಾಗುವರು ಆಗ ಒಬ್ಬ ಮಹದೀ ಮಸೀಹ್ (ಸರಿಯಾದ ಮಾರ್ಗದರ್ಶನ ಮಾಡುವವ)ಬರುವರು. ಅವರು ಇಸ್ಲಾಮಿನ ಯಥಾರ್ಥ ಪಾಠವನ್ನು ಲೋಕದ ಮುಂದಿರಿಸುವರು. ಈ ರೀತಿ ವಾಗ್ದಾನ ಮಾಡಲ್ಪಟ್ಟ ಮಹದೀ ಮಸೀಹ್ ತಾನೆಂದು ಅಹ್ಮದಿಯಾ ಜಮಾಅತಿನ ಸ್ಥಾಪಕರು ವಾದಿಸಿದರು.

## ಕನ್ನಡ ಭಾಷೆಯಲ್ಲಿ ಅಹ್ಮದಿಯಾ ಪ್ರಕಟಣೆಗಳು

1. ಇಸ್ಲಾಮೀ ತತ್ವಜ್ಞಾನ ಪ್ರಕಾಶ
2. ಅಹ್ಮದಿಯಾ ಸಂದೇಶ
3. ಇದು ಈಮಾನಿಗೆ ಅರ್ಹವಲ್ಲವೋ ?
4. ಒಂದು ಸುಸಂದೇಶ
5. ನಾನೇಕೆ ಇಸ್ಲಾಮ್ ಧರ್ಮದಲ್ಲಿ ವಿಶ್ವಾಸವುಳ್ಳವನಾಗಿದ್ದೇನೆ ?
6. ಶಾಂತಿ ಸಂದೇಶವೂ ಮುನ್ನೆಚ್ಚರಿಕೆಯೂ
7. ಪವಿತ್ರ ಖುರ್‌ಆನ್ ಹಾಗೂ ಹಝ್ರತ್ ಈಸಾನಬಿ (ಅ.)ಯ ಜೀವಿತ ಮತ್ತು ಮರಣ.
8. ಅಹ್ಮದಿಯಾ ಜಮಾಅತ್
9. ಅಹ್ಮದಿಯಾ ಸಂಘಟನೆ
10. ಮೈತ್ರಿ ಸಂದೇಶ

# ಮಾನವರ ಕರ್ತವ್ಯಗಳ ಕುರಿತು ಇಸ್ಲಾಮಿನ ಉಪದೇಶಗಳು

ಮಾನವರ ಕರ್ತವ್ಯಗಳ ಕುರಿತು ಇಸ್ಲಾಂ ಶ್ರೇಷ್ಠವಾದ ಉಪದೇಶಗಳನ್ನಿತ್ತು ವ್ಯಕ್ತಿಗಳ ಮತ್ತು ಜನಾಂಗಗಳ ಮಧ್ಯೆ ನೀತಿ ಮತ್ತು ಧರ್ಮದ ತಕ್ಕಡಿಯನ್ನು ಚೆನ್ನಾಗಿ ನೆಲೆ ನಿಲ್ಲಿಸಿದೆ. ಉದಾಹರಣೆಗಾಗಿ ಹೇಳುವುದಾದರೆ, ಬೇರೆ ಜನಾಂಗಗಳೊಡನೆ ವ್ಯವಹಾರ ಮಾಡುವ ಸಂಗತಿಯು ಕುರಿತು ಪವಿತ್ರ ಖುರ್‌ಆನ್ "ಔಫೂ ಬಿಲ್ ಅಹ್‌ದಿ ಇನ್ನಲ್ ಅಹ್‌ದ ಕಾನ ಮಸ್‌ವೂಲ' (ಸೂರತ್: ಬನೀ ಇಸ್ರಾಯಿೊಲ್; ರುಕೂವು : 4) "ಮುಸಲ್ಮಾನರೇ, ನೀವು ನಿಮ್ಮ ಒಪ್ಪಂದಗಳನ್ನು ಪೂರ್ಣ ಮಾಡಿರಿ, ಏಕೆಂದರೆ ನಿಮ್ಮ ಒಪ್ಪಂದಗಳ ಕುರಿತು ನೀವು ದೇವರಿಂದ ಪ್ರಶ್ನಿಸಲ್ಪಡುವಿರಿ'' ಎಂದು ಹೇಳುತ್ತಿದೆ ಮತ್ತೊಂದು ಕಡೆಯಲ್ಲಿ ಪವಿತ್ರ ಖುರ್‌ಅನ್ "ಲಾ ಯಜ್ರಿಮನ್ನಕುಮ್ ಷನ ಆನು ಖೌಮಿನ್ ಅಲಾ ಅ(ನ್)ಲ್ಲಾ ತಅದಿಲೂ ಇಅದಿಲೂ ಹೂವ ಅಖ್‌ರಬೂ ಲಿತ್ತಖ್ವಾ'' (ಸೂರತ್: ಮಾಇದ; ರಕೂವು:2)" ಯಾವುದಾದರೂ ಜನಾಂಗಕ್ಕೆ ನಿಮ್ಮ ಮೇಲಿರುವ ವೈರವು, ಅವರೊಡನೆ ನೀವು ವ್ಯವಹರಿಸುವಾಗ ನ್ಯಾಯದ ಮಾರ್ಗವನ್ನು ತೊರೆಯುವಂತೆ ಮಾಡದಿರಲಿ. ನೀವು ಎಲ್ಲಾ ಸ್ಥಿತಿಗಳಲ್ಲಿ ವೈರಿಗಳೊಡನೆ ಸಹ ನ್ಯಾಯವಾದ ರೀತಿಯಲ್ಲಿ ವ್ಯವಹಾರ ಮಾಡಬೇಕು. ಏಕೆಂದರೆ ಭಕ್ತಿಯು ಇದನ್ನೇ ಅಪೇಕ್ಷಿಸುತ್ತದೆ.''

ವ್ಯಕ್ತಿಗಳ ಹಕ್ಕುಗಳ ಕುರಿತು ಇಸ್ಲಾಂ ಪ್ರಥಮವಾಗಿ ಭ್ರಾತೃತ್ವ ಮತ್ತು ಸಮಾನತೆಯ ಸೂತ್ರವನ್ನು ನೆಲೆ ನಿಲ್ಲಿಸಿದೆ. ಮುಸ್ಲಿಮರು ಪರಸ್ಪರ ಸಹೋದರರೆಂದೂ ಹಕ್ಕುಗಳ ವಿಷಯದಲ್ಲಿ ಒಬ್ಬನಿಗೆ ಮತ್ತೊಬ್ಬನ ಮೇಲೆ ಪ್ರಾಧಾನ್ಯತೆ ಇಲ್ಲವೆಂದೂ ಇಸ್ಲಾಂ ವ್ಯಕ್ತಗೊಳಿಸಿದೆ. ಒಬ್ಬನು ತನ್ನ ಸ್ವಂತ ಪರಿಶ್ರಮದಿಂದ ಅಭಿವೃದ್ಧಿಯನ್ನು ಹೊಂದಿದರೆ ಅವನು ಇತರರಿಂದ ಮರ್ಯಾದಿಸಲ್ಪಡಲು ಯೋಗ್ಯನೇ ಹೊರತು ಅವನಿಗೆ ಪ್ರತ್ಯೇಕ ಹಕ್ಕುಗಳಿಲ್ಲ. ಇಸ್ಲಾಮಿನಲ್ಲಿ ಹಕ್ಕುಗಳ ಸಂಗತಿಯಲ್ಲಿ ಸಂತಾನ ಸಂಬಂಧವಾದ, ಜನಾಂಗ ಪರವಾದ ಅಥವಾ ಕೌಟುಂಬಿಕವಾದ ವ್ಯತ್ಯಾಸಗಳಿಲ್ಲ; ಎಲ್ಲರೂ ಸಮಾನರು. ಇದೇ ರೀತಿ ಇಸ್ಲಾಮಿನಲ್ಲಿ ಜಾತಿವಾರು ಪಂಗಡಗಳ ಸಮಸ್ಯೆಯಿಲ್ಲ. ಧಾರ್ಮಿಕ ಕಾರ್ಯಗಳನ್ನು ನಡೆಸಲು ಮುಂದಾಳುಗಳಾಗಿರಲಿಕ್ಕೆ ಅಥವಾ ಧಾರ್ಮಿಕ ಪಾಠಗಳನ್ನು ಕಲಿಸಲು ಜನರ ಪ್ರತ್ಯೇಕವಾದೊಂದು ಜಮಾಅತ್ ಅಥವಾ ಕೂಟವನ್ನು ನಿರ್ದೇಶಿಸಿ ಇವರೇ ಆ ಕೆಲಸಗಳನ್ನು ಮಾಡತಕ್ಕದೆಂದು ಇಸ್ಲಾಂ ಆಜ್ಞಾಪಿಸಿಲ್ಲ. ಪ್ರತಿಯೊಬ್ಬನಿಗೂ ಪ್ರತಿಯೊಂದು ವಲಯದಲ್ಲಿಯೂ ಅಭಿವೃದ್ಧಿಯ ಮಾರ್ಗವು ತೆರೆದಿದೆ.

ಗಂಡು ಹೆಣ್ಣಿನ ಮಧ್ಯದಲ್ಲಿಯೂ ಇಸ್ಲಾಂ ನಿಜವಾದ ನ್ಯಾಯವನ್ನು ನೆಲೆನಿಲ್ಲಿಸಿದೆ. ಒಂದು ಕಡೆಯಲ್ಲಿ ಅವರ ಪ್ರಕೃತಿಜನ್ಯವಾದ ವ್ಯತ್ಯಾಸವನ್ನು ಒಪ್ಪಿಕೊಂಡಿದೆ. ಮತ್ತೊಂದು ಕಡೆಯಲ್ಲಿ ಹಕ್ಕುಗಳ ವಿಷಯದಲ್ಲಿ ಅವರನ್ನು ಸಮಾನವಾಗಿರಿಸಿದೆ. ಹೆಣ್ಣಿನೊಡನೆ ಮೃದುವಾಗಿ ಸ್ನೇಹ ಮತ್ತು ಕೃಪೆಯಿಂದ ವರ್ತಿಸುವಂತೆ ಗಂಡಿಗೆ ಆಜ್ಞಾಪಿಸಿದೆ. ಇದೇ ರೀತಿಯಲ್ಲಿ ಇಸ್ಲಾಂ ಹೆಂಗಸರಿಗೆ ವಾರೀಸು ಹಕ್ಕನ್ನು ದಯಪಾಲಿಸಿದೆ. ಹೆಂಗಸರು ತಮ್ಮ ಸ್ವಂತ ಹೆಸರಿನಲ್ಲಿ ಆಸ್ತಿಯನ್ನು ಹೊಂದುವಂತೆಯೂ ತಮ್ಮ ಸ್ವಂತ ಇಷ್ಟದ ಪ್ರಕಾರ ಉಪಯೋಗಿಸುವಂತೆಯೂ ಹಕ್ಕುಗಳನ್ನು ಕೊಟ್ಟಿದೆ.

**ವಾರೀಸು** ಹಕ್ಕಿನ ವಿಷಯದಲ್ಲಿ ಬರೇ ಹಿರಿಯ ಮಗನಿಗೆ ಮಾತ್ರ ಹಕ್ಕಿರುವಂತಹ ಅಥವಾ ಕೇವಲ ಗಂಡು ಮಕ್ಕಳಿಗೆ ಮಾತ್ರ ಹಕ್ಕಿರುವಂತಹ ಅನ್ಯಾಯಕರವಾದ ಸೂತ್ರಗಳನ್ನು ಇಸ್ಲಾಂ ಒಪ್ಪಿಕೊಂಡಿಲ್ಲ. ಇಸ್ಲಾಂ ಎಲ್ಲಾ ಮಕ್ಕಳಿಗೂ ಹಕ್ಕನ್ನು ಕೊಟ್ಟಿದೆ. ಹೀಗೆ ಇಸ್ಲಾಂ

ಆಸ್ತಿಯ ನ್ಯಾಯವಾದ ಹಂಚುವಿಕೆಯು ಅಸ್ತಿಪಾರವನ್ನು ನೆಲೆನಿಲ್ಲಿಸಿದೆ. ಸ್ವತ್ತಿನ ಹಂಚುವಿಕೆಯಿಂದ ವಂಶದ ಅಧಃಪತನವಾಗುತ್ತದೆಂಬ ಸುಳ್ಳು ತತ್ವವು ಲೋಕದಲ್ಲಿ ಬಹಳ ನಾಶಕ್ಕೂ ಹೆಚ್ಚಿನ ಅನ್ಯಾಯಗಳಿಗೂ ಕಾರಣವಾಯಿತು. ಆದುದರಿಂದ ಇಸ್ಲಾಂ ಈ ತತ್ವವನ್ನು ಆದಿಯಲ್ಲೇ ಒಪ್ಪಿಕೊಳ್ಳಲಿಲ್ಲ. ಇಸ್ಲಾಂ ಎಲ್ಲ ಮಕ್ಕಳಿಗೆ ಸಮಾನವಾದ ಭಾಗಗಳನ್ನು ಕೊಟ್ಟು ಅವರನ್ನು ಜೀವನದ ಹೋರಾಟದಲ್ಲಿ ಒಂದೇ ಮಟ್ಟದಲ್ಲಿ ನಿಲ್ಲಿಸಿದೆ.

ಇಸ್ಲಾಂ **ಬಡ್ಡಿ**ಯನ್ನು ನಿರೋಧಿಸಿದೆ. ಏಕೆಂದರೆ ಬಡ್ಡಿಯನ್ನು ಪಡಕೊಳ್ಳುವುದರಿಂದ ಮೊದಲನೆಯದಾಗಿ ಮಾನವನ ದಯಾಗುಣಕ್ಕೂ ಪರ ಹಿತ ಮಾಡಬೇಕೆಂಬ ಭಾವನೆಗೂ ಹಾನಿಯುಂಟಾಗುತ್ತದೆ. ಎರಡನೆಯದಾಗಿ ತನ್ನ ಶಕ್ತಿಯನ್ನು ಮೀರಿ ಸಾಲ ತೆಗೆಯಲು ಮನುಷ್ಯನಿಗೆ ಧೈರ್ಯವುಂಟಾಗುತ್ತದೆ. ಇದು ಬಹಳ ವಿನಾಶಕಾರಿಯಾಗಿದೆ. ಇಸ್ಲಾಂ ಬಡ್ಡಿ ರಹಿತ ವ್ಯಾಪಾರವನ್ನು ಮಾಡಲು ಸಮ್ಮತಿಸಿದೆ. ಬಡ್ಡಿ ಪಡಕೊಳ್ಳುವವನನ್ನೂ ಬಡ್ಡಿ ಕೊಡುವವನನ್ನೂ ತಪ್ಪುಗಾರನನ್ನಾಗಿ ಮಾಡಿದೆ. ಈಗಿನ ಕಾಲದಲ್ಲಿ ಬಡ್ಡಿಯ ಬಲೆಯು ವಿಶಾಲವಾಗಿ ಹರಡಿಕೊಂಡಿರುವ ಕಾರಣದಿಂದ ಪ್ರಾಯಶಃ ಬಡ್ಡಿಯ ವ್ಯವಹಾರವಿಲ್ಲದೆ ಜೀವನವೇ ಅಸಾಧ್ಯವೆಂದು ಖಂಡಿತವಾಗಿ ಕಾಣಬಹುದು. ಇದು ಈಗಿನ ವಿಷಮಯವಾದ ವಾತಾವರಣದಿಂದ ಉಂಟಾದ ದೃಷ್ಟಿದೋಷವಾಗಿದೆ. ಮುಸಲ್ಮಾನರು ಭೂಲೋಕದ ಅರ್ಧಕ್ಕಿಂತಲೂ ಹೆಚ್ಚು ಭಾಗಗಳಲ್ಲಿ ಆಳುತ್ತಿದ್ದಾಗ ಬಡ್ಡಿಯ ವ್ಯವಹಾರವಿಲ್ಲದೆಯೇ ಜೀವನವು ಸಾಗುತ್ತಿತ್ತು:

ಇಸ್ಲಾಂ **ಮದ್ಯ**ದ ಉಪಯೋಗವನ್ನು ನಿರೋಧಿಸಿದೆ. ಏಕೆಂದರೆ ಮದ್ಯಪಾನದಿಂದ ಮನುಷ್ಯನ ಶ್ರೇಷ್ಠವಾದ ಬುದ್ಧಿಶಕ್ತಿಗೆ ದೋಷವು ತಗಲುತ್ತದೆ. ಮದ್ಯದ ಉಪಯೋಗದಿಂದ ಕ್ಷಣಿಕವಾದ ಒಂದು ಸ್ಫೂರ್ತಿಯು ನಿಶ್ಚಯವಾಗಿ ತಲೆದೋರುತ್ತದೆ. ಮದ್ಯದ ಕೆಲವು ಉಪಯೋಗಕರವಾದ ಗುಣಗಳನ್ನು ಪವಿತ್ರ ಖುರ್‌ಆನ್ ಸಹ ಒಪ್ಪಿಕೊಂಡಿದೆ. ಆದರೆ ಒಟ್ಟು ಫಲವು ದೋಷಕರವಾಗಿದೆ. ಮದ್ಯವನ್ನು ಉಪಯೋಗಿಸುವುದರಿಂದ ಮನುಷ್ಯನ ಬುದ್ಧಿಯ ಮೇಲೆ ಪರದೆಯು ಎಳೆಯಲ್ಪಡುತ್ತದೆ. ಒಬ್ಬ ಅಮಲೇರಿದ ವ್ಯಕ್ತಿಯು ಮನುಷ್ಯನೆಂದು ಕರೆಯಲ್ಪಡಲು ಯೋಗ್ಯನಾಗಿ ಇರುವುದಿಲ್ಲ. ಸ್ವಲ್ಪ ಉಪಯೋಗದಿಂದ ಹೆಚ್ಚಿನ ಉಪಯೋಗದ ಕಡೆಗೆ ಸೆಳೆಯುವಂತಹ ವಸ್ತುಗಳಲ್ಲಿ ಮದ್ಯವು ಒಂದಾದುದರಿಂದಲೂ, ಅದರ ಸ್ವಲ್ಪ ಉಪಯೋಗದಿಂದ ಅಧಿಕ ಉಪಯೋಗದ ಕಡೆಗೆ ಒಯ್ಯಲ್ಪಡುವ ಭಯವು ಯಾವಾಗಲೂ ಇರುವುದರಿಂದಲೂ, ಮಿತಿಯನ್ನು ಮೀರದೆ ಇರುವಂತೆ ತಡೆಯುವುದು ಮದ್ಯಪಾನ ಪ್ರಾರಂಭಿಸಿದವರಿಗೆ ಅಸಾಧ್ಯವಾದುದರಿಂದಲೂ ಇಸ್ಲಾಂ ಮದ್ಯದ ಸ್ವಲ್ಪ ಉಪಯೋಗವನ್ನೂ ಹೆಚ್ಚು ಉಪಯೋಗವನ್ನೂ ನಿರೋಧಿಸಿದೆ. ಈ ಕೊಳಕು ಅಭ್ಯಾಸವನ್ನು ಬುಡದಿಂದಲೇ ಕಿತ್ತೊಗೆಯಲು ಆಜ್ಞಾಪಿಸಿದೆ. ಇದೇ ರೀತಿಯಲ್ಲಿ ಮದ್ಯದ ಉಪಯೋಗದಿಂದ ದುಂದು ಖರ್ಚು ಮಾಡುವ ಅಭ್ಯಾಸವುಂಟಾಗುತ್ತದೆ. ಕೆಲವರು ಮದ್ಯಪಾನದ ಅಭ್ಯಾಸದ ಕಾರಣದಿಂದಲೇ ತಮ್ಮ ಸ್ಥಿತಿಯನ್ನು ಮೀರಿ ಖರ್ಚು ಮಾಡಲು ನಿರ್ಬಂಧಿತರಾಗುತ್ತಾರೆ.

ಇದೇ ಸ್ಥಿತಿ **ಜುಗಾರಿ** ಆಟಗಳದ್ದಾಗಿದೆ. ಇಸ್ಲಾಂ ಇದನ್ನು ನಿರೋಧಿಸಿದೆ. ಏಕೆಂದರೆ ಇದು ಚಾನ್ಸ್ ಅಥವಾ ಸಂದರ್ಭದಿಂದ ಒದಗುವ ಪ್ರಯೋಜನದ ಆಟವಾಗಿದೆ. ಇದರಲ್ಲಿ ಮನುಷ್ಯನ ಪ್ರಯತ್ನ ಮತ್ತು ಜಾಣ್ಮೆಗೆ ಪ್ರವೇಶವಿಲ್ಲ. ಇಂತಹ ವಿಷಯಗಳಲ್ಲಿ ಪ್ರವೇಶಿಸಲು ಮನುಷ್ಯರಿಗೆ ಅನುಮತಿಯನ್ನು ಕೊಟ್ಟರೆ ಅವರು ನ್ಯಾಯವಾಗಿ ಮತ್ತು ಪರಿಶ್ರಮದಿಂದ ಆಹಾರವನ್ನು ಗಳಿಸುವ ಬದಲು ತಮ್ಮ ಸಮಯವನ್ನು ಅನಾವಶ್ಯವಾಗಿ ನಷ್ಟ ಪಡಿಸುವ ಅಭ್ಯಾಸವುಳ್ಳವರಾಗುತ್ತಾರೆ. ಅವರಲ್ಲಿ ಹಣದ ಅಯೋಗ್ಯವಾದ ದುರಾಶೆಯೂ ಉಂಟಾಗುತ್ತದೆ. ಇದೇ ರೀತಿಯಲ್ಲಿ **ಕೊಲೆ, ಕಳವು,** ದರೋಡೆ, ಜಗಳ, ಸುಳ್ಳು ಹೇಳುವುದು, ಮೋಸ ಮಾಡುವುದು, ಪರರನ್ನು ನಂಬಿಸಿ ವಂಚಿಸುವುದು, ಕೆಟ್ಟ ಭಾವದಿಂದ ನೋಡುವುದು, ವ್ಯಭಿಚಾರ, ಲಂಚ ಇತ್ಯಾದಿಗಳನ್ನು ಇಸ್ಲಾಂ ನಿರೋಧಿಸಿದೆ. ಸತ್ಯ ಪ್ರಾಮಾಣಿಕತೆ ವಿಧೇಯತೆ, ನ್ಯಾಯ, ಶಾಂತಿಯನ್ನು ಇಚ್ಛಿಸುವುದು, ಬಡವರ ಸೇವೆ, ಮರ್ಯಾದೆ ತೋರಿಸುವುದು ಮೊದಲಾದ ಪಾಠಗಳನ್ನು ಇಸ್ಲಾಂ ಕಲಿಸಿದೆ.

ಇಸ್ಲಾಮಿನ ಮತ್ತೊಂದು ಆಜ್ಞೆ **ಪರ್ದಾ** ಪದ್ಧತಿಯ ಕುರಿತು ಮತ್ತು **ಕಣ್ಣಿನ ನೋಟ**ವನ್ನು ಕೆಳಗಡೆ ಹರಿಯಿಸುವ ಕುರಿತಾಗಿದೆ. ಹೆಂಗಸರು ತಮಗೆ ಹತ್ತಿರದ

ಸಂಬಂಧವಿರದ ಗಂಡಸರ ಎದುರು ಬಂದಾಗ ತಮ್ಮ ಸೌಂದರ್ಯವನ್ನು ಅಡಗಿಸಬೇಕೆಂದು ಇಸ್ಲಾಂ ಆಜ್ಞಾಪಿಸಿದೆ. ವಿವಾಹವಾಗಲು ನಿರೋಧಿಸಲ್ಪಡದ ಸ್ತ್ರೀ ಪುರುಷರು ಎದುರಾದಲ್ಲಿ ಅವರಿಬ್ಬರೂ ತಮ್ಮ ದೃಷ್ಟಿಯ ನೋಟವನ್ನು ಕೆಳಗಡೆ ಹರಿಯಿಸಬೇಕೆಂದೂ ಇಸ್ಲಾಂ ಆಜ್ಞಾಪಿಸಿದೆ. ಇವರು ಪರಸ್ಪರ ನಿರ್ಲಜ್ಜೆಯಿಂದ ಸ್ವತಂತ್ರರಾಗಿ ನೋಡುವುದನ್ನೂ ಸ್ತ್ರೀಯು ತನ್ನ ಮೈಯನ್ನು ಮರೆಮಾಡದೆ ಪುರುಷನೆದುರು ಬರುವುದನ್ನೂ ಇಸ್ಲಾಂ ನಿರೋಧಿಸಿದೆ. ಒಬ್ಬರು ಮತ್ತೊಬ್ಬರನ್ನು ದಿಟ್ಟಿಸಿ ನೋಡುವುದರಿಂದ ಹೃದಯದಲ್ಲಿ ಮಲೀನವಾದ ಆಲೋಚನೆಗಳು ಉಂಟಾಗುವ ಸಾಧ್ಯತೆಯಿರುವುದರಿಂದ ಇದನ್ನು ನಿವಾರಿಸಲು ಈ ರೀತಿಯ ಆಜ್ಞೆಯನ್ನು ಇಸ್ಲಾಂ ಕೊಟ್ಟಿದೆ. ಹೃದಯದಲ್ಲಿ ಇಂತಹ ಅಶುದ್ಧ ಯೋಚನೆಗಳು ಉದ್ಭವಿಸದಂತಹ ಪರಿಶುದ್ಧರು ನಿಶ್ಚಯವಾಗಿಯೂ ಇರಬಹುದು. ಆದರೆ ಕಾನೂನು ಉದ್ದೇಶಿಸುವುದು ಬಹು ಸಂಖ್ಯಾಕರ ಗುಣವನ್ನಾದುದರಿಂದ, ಬಹು ಸಂಖ್ಯಾಕರ ಗುಣಸ್ವಭಾವಗಳನ್ನು ನಿಯಂತ್ರಿಸುವ ಮೂಲ ಸೂತ್ರವನ್ನು ಕೈಕೊಂಡು ಈ ಬುದ್ಧಿಪೂರ್ಣವಾದ ಆಜ್ಞೆಯ ಮೂಲಕ ಇಸ್ಲಾಂ ಕೆಡುಕಿನ ಬುಡವನ್ನು ಕತ್ತರಿಸುವ ಪ್ರಯತ್ನ ಮಾಡಿದೆ. ಸ್ತ್ರೀ ಪುರುಷರ ಒಡನಾಟವು ಹೆಚ್ಚು ಸಂದರ್ಭಗಳಲ್ಲಿ ಕೆಟ್ಟ ಪರಿಣಾಮವನ್ನುಂಟು ಮಾಡುತ್ತದೆಯೆಂಬುದು ಲೋಕದ ಅನುಭವವಾಗಿದೆ. ಆದರೆ ಪರದೆಯ ಆವರಣವಿದ್ದರೂ ಹೆಂಗಸರನ್ನು ಇಸ್ಲಾಂ ಧರ್ಮವು ಮನೆಯ ನಾಲ್ಕು ಗೋಡೆಗಳೊಳಗೆ ಖೈದಿಗಳನ್ನಾಗಿ ಮಾಡಿಲ್ಲ. ತಮ್ಮ ರೂಪವನ್ನು ಇತರರೆದುರು ಪ್ರದರ್ಶಿಸುವುದನ್ನು ತಡೆದುಕೊಂಡು ಆವಶ್ಯಕತೆಗಳ ಪ್ರಕಾರ ಮನೆಯಿಂದ ಹೊರಟು ಪ್ರಾಪಂಚಿಕ ಮತ್ತು ಮತ ಸಂಬಂಧವಾದ ಕೆಲಸಗಳಲ್ಲಿ ಭಾಗವಹಿಸಲು ಸ್ತ್ರೀಯರಿಗೆ ಇಸ್ಲಾಂ ಅನುಮತಿಯನ್ನು ಕೊಟ್ಟಿದೆ.

ಇಸ್ಲಾಮಿನ ಮುಖಾಂತರ ಮುಸ್ಲಿಮರಿಗೆ ದೊರಕಿದ ಸತ್ಯಸಂದೇಶವನ್ನು ಇತರರಿಗೆ ತಲಪುವಂತೆ ಮಾಡುವುದು ಮತ್ತು ಇಸ್ಲಾಮಿನ ಪ್ರಕಾಶದಿಂದ ಇತರರೂ ಪ್ರಕಾಶಿಸಲ್ಪಡುವಂತಾಗುವಂತೆ ಮಾಡುವುದು ಮತ್ತು ಇದರ ಮೂಲಕ ದೇವರ ದಾರಿ ತಪ್ಪಿದ ದಾಸರು ಪುನಃ ದೇವರ ದಾರಿಗೆ ಬರುವಂತೆ ಮಾಡುವುದು–ಈ ಉದ್ದೇಶಗಳಿಂದ ಕೂಡಿ ಮುಸಲ್ಮಾನರು ಮತ ಪ್ರಚಾರ ಕಾರ್ಯದಲ್ಲಿ ಮಗ್ನರಾಗಿರಲು ಇಸ್ಲಾಂ ಆಜ್ಞಾಪಿಸಿದೆ. ಇಸ್ಲಾಮಿನ ಪ್ರಚಾರ ಮಾಡುವ ವಿಷಯದಲ್ಲಿ ಯಾವುದಾದರೂ ಜನಾಂಗದ ಅಥವಾ ವಂಶದ ವ್ಯತ್ಯಾಸವಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಇಸ್ಲಾಮನ್ನು ಸ್ವೀಕರಿಸಿ ಇಸ್ಲಾಮಿನ ವಿಶಾಲವಾದ ಭ್ರಾತೃತ್ವದಲ್ಲಿ ಸಮಾನ ಸ್ಥಾನದಲ್ಲಿರಬಹುದು.

( ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೇಬ್ M. A.ರವರ 'ಹಖೀಖೀ ಇಸ್ಲಾಂ' ಎಂಬ ಪುಸ್ತಕದಿಂದ. ಅನುವಾದಕ: M. ಉಬೈದುಲ್ಲಾ.)


**ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ**

## " ಮೈತ್ರಿ ಸಂದೇಶ "

"....ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು ......" —ಉದಯವಾಣಿ

"....ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......." —ನವಭಾರತ

ಪುಟಗಳು: 48 ಬೆಲೆ: **ಒಂದು ರೂಪಾಯಿ**

ಬರೆಯಿರಿ:—— The Editor:

**'YUGARASHMI' Kannada Quarterly**
**23/1008, Ansari Road,**
**Bunder, Mangalore-575001.**

# ಟ್ಯೂರಿಸ್*ನಲ್ಲಿರುವ ಕ್ರೈಸ್ತನ ಶವದ ವಸ್ತ್ರ
# ನಿಜ ಅವಶೇಷ

ವೆಟಿಕನ್ ನಗರ, ಮಾರ್ಚ್ 21: ಇಟಲಿಯ ಉತ್ತರ ಭಾಗದ ನಗರ ಟ್ಯೂರಿಸ್‌ನಲ್ಲಿ ಬೆಳ್ಳಿಯ ಕರಂಡಕದಲ್ಲಿ ಈಗಲೂ ಕಾಪಾಡಲ್ಪಟ್ಟಿರುವ 14 ಅಡಿ ಉದ್ದ 3 ಅಡಿ ಅಗಲದ ಯೇಸುಕ್ರಿಸ್ತನ ಶವದ ಹೊದಿಕೆಯ ನಿಜತ್ವವನ್ನು ಕಂಡುಕೊಳ್ಳಲು 7 ವರ್ಷಗಳ ದೀರ್ಘದ ಸವಿವರ ಶೋಧಗಳು ನಡೆದಿದ್ದು ಕ್ರಿಸ್ತನನ್ನು ಶಿಲುಬೆಗೇರಿಸಲ್ಪಟ್ಟ ತರುವಾಯ ಆತನ ಶವಕ್ಕೆ ಹೊದೆಯಲಾದುದೆಂದು ಹೇಳಲಾದ ಆ ಪವಿತ್ರ ಅವಶೇಷ ಠಕ್ಕು ಎಂದು ಹೇಳಲಾಗುವುದಿಲ್ಲ ಎಂದು ತಜ್ಞ ಶೋಧಕರ ತಂಡದ ಉಪಾಧ್ಯಕ್ಷ ಧರ್ಮಗುರು ಜೊಸ್ ಕುಟಿನೊ ಅದರ ಯಥಾರ್ಥತೆಯ ಹೆಚ್ಚಿನ ಶೋಧ ಅಗತ್ಯವೆಂದು ಸಾರಿದ್ದಾರೆ.

ಅದು ಇಟಲಿಯ ಹಿಂದಿನ ರಾಜಮನೆತನ ಸವ್ಯೊಯ ಸೊತ್ತಾಗಿದ್ದು ಬೆಳ್ಳಿಯ ಕರಂಡಕದಲ್ಲಿದ್ದು ಕಬ್ಬಿಣದ ಸರಳುಗಳ ಹಿಂದೆ ಸುರಕ್ಷಿತವಾಗಿದೆ. ಕಳೆದ 100 ವರ್ಷಗಳಲ್ಲಿ ಕೇವಲ 10 ಸಲ ಅದನ್ನು ಬಹಿರಂಗಪಡಿಸಲಾಗಿದ್ದು ಮೂರು ವರ್ಷಗಳ ಹಿಂದೆ ಇಟಲಿಯ ಟೆಲಿವಿಷನ್ ಕಾರ್ಯಕ್ರಮವೊಂದರಲ್ಲಿ ಅದನ್ನು ಸಾರ್ವಜನಿಕರಿಗೆ ತೋರಿಸಲಾಗಿತ್ತು. ಅದರ ಮೇಲೆ ಕ್ರಿಸ್ತನ ಮುಖ ಅಚ್ಚೊತ್ತಿದ ಕುರುಹು ಮತ್ತು ದೇಹದ ಆಕಾರ ಕೂಡಾ ಗೋಚರಿಸುತ್ತದೆ. ಅದರ ಛಾಯಚಿತ್ರ ತೆಗೆದಿರುವ ಸ್ವಿಜರ್ಲೆಂಡಿನ ಚಿತ್ರ ತಜ್ಞ ಕೂಡಾ ಅದೊಂದು ಕಲ್ಪನೆಯಲ್ಲ ಎಂದಿದ್ದಾನೆ. ಕ್ರಿಸ್ತನ ಮರಣ ಕಾಲದ ವಸ್ತುಗಳು ಆ ತೆರನಾದ ವಸ್ತುಗಳಿಂದ ತಯಾರಿಸಲಾಗುತಿತ್ತು ಎಂಬ ತೀರ್ಮಾನವನ್ನು ಶೋಧ ತಂಡದ ಸಲಹೆಗಾರ ಮೆಕ್ಸ್‌ಫ್ರೈಯಿ ಎಂಬವರು ಹೇಳಿದ್ದಾರೆ. ಅದರ ಮೇಲಿದ್ದ ಧೂಳನ್ನು ಪರೀಕ್ಷಿಸಿದಾಗ ಧೂಳು ಪೆಲೆಸ್ತೀನ್ ಇಟೆಲಿ ದೇಶಗಳದ್ದೆಂದು ತಿಳಿದು ಅದರ ಯಥಾರ್ಥತೆಯನ್ನು ಸಾರಲು ಒಂದು ಮುಖ್ಯ ಕಾರಣವಾಗಿರುತ್ತದೆ.

ಶಿಲುಬೆಗೇರಿಸುವ ಮೂಲಕ ಆಗ ಮರಣ ಶಿಕ್ಷೆಗೆ ಗುರಿಪಡಿಸುವಾಗ ಅಪರಾಧಿಯನ್ನು ಸಾಯುವ ತನಕ ಶಿಲುಬೆಯಲ್ಲೇ ಇರಿಸುವ ನಿಯಮವಿರಲಿಲ್ಲ. ಆದುದರಿಂದ ಕ್ರಿಸ್ತನ ಶವಕ್ಕೆ ಹೊದೆಯಲಾಗಿರುವ ಆ ವಸ್ತ್ರದ ಮೇಲೆ ರಕ್ತಕಲೆಗಳಿವೆ. ಆದುದರಿಂದ ಆತನು ಶಿಲುಬೆಯಲ್ಲೇ ಸತ್ತಿರಲಿಲ್ಲ ಎಂದು ಪಶ್ಚಿಮ ಜರ್ಮನಿಯ ಲೇಖಕ ಕರ್ಟ್ ಬೆರ್ನಾ ಅಭಿಪ್ರಾಯವಿತ್ತಿದ್ದಾರೆ. ಅದು ಕ್ರಿಸ್ತನನ್ನು ಹೊದಿಸಲಾಗಿರುವ ವಸ್ತ್ರ ಎಂಬುದಕ್ಕೆ ಸಮ್ಮತಿಸುವ ವೆಟಿಕನ್ ಅರಮನೆ ಕ್ರಿಸ್ತನು ಶಿಲುಬೆಯಲ್ಲಿ ಸತ್ತಿರಲಿಲ್ಲ ಎಂಬ ವಾದವನ್ನು ಸಮ್ಮತಿಸುವುದಿಲ್ಲ.

ಆ ಪುರಾತನ ಅವಶೇಷ ಹಲವು ಧಾಳಿಗಳನ್ನು ಎದುರಿಸಿ ಪಾರಾಗಿದೆ. 1972ರ ಅಕ್ಟೋಬರ ದಿನಾಂಕ 27ರಂದು ಆ ಪವಿತ್ರ ಅವಶೇಷವಿರುವ ಇಗರ್ಜಿಯನ್ನು ಪ್ರವೇಶಿಸಿದವರು ಅದರ ಬಳಿಯಲ್ಲಿದ್ದ ಇತರ ಪವಿತ್ರ ಅವಶೇಷಗಳನ್ನು ಹರಿದು ಸುಟ್ಟು ಹಾಕಿದ್ದರು. ಆದರೆ ಅದನ್ನೊಂದನ್ನೇ ಸುರಕ್ಷಿತವಾಗಿ ಬಿಟ್ಟು ಹೋಗಿದ್ದರು.

—'ನವಭಾರತ' ದೈನಿಕ, ಮಂಗಳೂರು.
ದಿನಾಂಕ: ಮಾರ್ಚ 22, 1976.

* ಟ್ಯೂರಿನ್

# ಸಂಪಾದಕರಿಗೆ ಪತ್ರ

ಪ್ರಿಯರೇ,

ತಾವು ಕಳುಹಿಸಿದ 'ಯುಗರಶ್ಮಿ'ಯ ಸಂಚಿಕೆಗಳು ಕೈಸೇರಿವೆ. ಕೃತಜ್ಞತೆಗಳು.

ಅನ್ಯಮತಗಳ ಕುರಿತು ಇರುವ ಮೂಢನಂಬಿಕೆ, ಅಜ್ಞಾನ, ತಪ್ಪು ಭಾವನೆಗಳನ್ನು ತೊಡೆದು ಹಾಕಲು, ಪರಸ್ಪರರನ್ನು ತಿಳಿದುಕೊಳ್ಳಲು ಯುಗರಶ್ಮಿ ಅತ್ಯುಪಯುಕ್ತವಾದ ಪತ್ರಿಕೆಯಾಗಿದೆ ಎಂದು ನನ್ನ ಮತ.

ಯೇಸುಕ್ರಿಸ್ತರು ಶಿಲುಬೆಯಿಂದ ಜೀವಂತವಾಗಿ ಪಾರಾದರೆಂದೂ ನಂತರ ಶಿಷ್ಯರಿಗೆ ಕಾಣಿಸಿಕೊಂಡು ಬೋಧಿಸಿದರೆನ್ನುವ ಅಂಶವೂ, ಶ್ರೀ ಕೃಷ್ಣ, ಬೆಣ್ಣೆ ಮತ್ತು ಗೋಪಿಕೆಯರ ಬಗ್ಗೆ ಬರೆಯುತ್ತಾ ಬೆಣ್ಣೆಯನ್ನು ಆಧ್ಯಾತ್ಮಿಕ ಜ್ಞಾನಕ್ಕೂ ಗೋಪಿಕಾ ಸ್ತ್ರೀಯರ ವಸ್ತ್ರವನ್ನು ಭಕ್ತಿ ಅಥವಾ ಸತ್ಕರ್ಮಕ್ಕೆ ಹೋಲಿಸಿ ಪ್ರತಿಪಾದಿಸಿದ್ದೂ ಕುತೂಹಲಕಾರಿಯಾಗಿದೆ.

ಪತ್ರಿಕಾ ಸಂಪಾದನೆಯ ಅಡರು ತೊಡರು, ನ್ಯೂಸ್‌ಪ್ರಿಂಟ್‌ನ ಅಭಾವ ಇವೊಂದೂ ನಿಮ್ಮ ಉದ್ದೇಶಕ್ಕೆ ಭಂಗ ತರದಿರಲೆಂದು ಹಾರೈಸುವ, ನಿಮ್ಮವನೇ ಆದ, **—ತಿಲಕನಾಥ, ಮಂಜೇಶ್ವರ.**

ಮಹನೀಯ ಸಂಪಾದಕರೆ,

'ಯುಗರಶ್ಮಿ'ಯ ಪ್ರತಿಗಳು ಲಭಿಸಿ ನಾನು ತುಂಬಾ ಆಭಾರಿಯಾಗಿರುವೆನು.

ಕರ್ನಾಟಕ ರಾಜ್ಯದ ಕನ್ನಡ ಬಲ್ಲವರನ್ನುದ್ದೇಶಿಸಿ ಆರಂಭಿಸಲ್ಪಟ್ಟ ಯುಗರಶ್ಮಿಗೆ ಎಲ್ಲಾ ವಿಭಾಗದವರಿಂದ ಪ್ರೋತ್ಸಾಹ ಲಭಿಸುವುದರಲ್ಲಿ ಸಂದೇಹವಿಲ್ಲ.

ಅಹ್ಮದೀಯ ಜಮಾಅತಿನ ಧ್ಯೇಯ ಧೋರಣೆಗಳನ್ನು ವಿಪದೀಕರಿಸುವ ಈ ಪತ್ರಿಕೆಯ ಮೂಲಕ ಜನರಲ್ಲಿ ಅಹ್ಮದೀಯರ ಕುರಿತುಂಟಾದ ತಪ್ಪಭಿಪ್ರಾಯಗಳನ್ನು ನೀಗಿಸಲೂ ಪ್ರಯೋಜನವಾಗಬಹುದೆಂದು ನನ್ನ ವಿಶ್ವಾಸ.

.........................ಎಲ್ಲಾ ಸಹೃದಯರ ಬೆಂಬಲ ಪತ್ರಿಕೆಗೆ ಲಭಿಸಲಿ ಎಂದು ಪ್ರಾರ್ಥನೆ.

**—ಒಬ್ಬ ಮುಸ್ಲಿಂ ಪತ್ರಿಕೋದ್ಯಮಿ, ಕುಂಬಳೆ.**

ಪ್ರಿಯರೆ,

ನಿಮ್ಮ ಪತ್ರಿಕೆಯನ್ನು ಮಿತ್ರರೋರ್ವರ ನೆರವಿನಿಂದ ನೋಡುವ ಅವಕಾಶ ದೊರಕಿತು. ಇಸ್ಲಾಂ ಧರ್ಮದ ವಿಚಾರವಾಗಿ ಕನ್ನಡ ನಾಡಿನ ಜನರಿಗೆ ಸವಿಸ್ತಾರವಾಗಿ ಸಂದೇಶವನ್ನು ತಲಪಿಸ ಹೊರಟ ನಿಮ್ಮ ಸಾಹಸಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಮತೀಯವಾದ ಅಜ್ಞಾನವನ್ನು ಜನತೆಯಿಂದ ತೊಡೆದು ಹಾಕುವರೆ ಇಂತಹ ಪ್ರಯತ್ನಗಳು ಅಗತ್ಯವಾಗಿ ನಡೆಯಬೇಕಿದೆ. ಪರಮಾತ್ಮನು ನಿಮ್ಮ ಪ್ರಯತ್ನಕ್ಕೆ ಜಯವನ್ನೊದಗಿಸಲಿ ಎಂದು ಹಾರೈಸುತ್ತೇನೆ.

**—ಕೆ. ವೆಂಕಟ ಕೃಷ್ಣಯ್ಯ,**
ಸಂಪಾದಕ, ಗೀತಾ ಪ್ರಕಾಶನ, ಕಾಸರಗೋಡು.

# ಕಳೆದ ಸಂಚಿಕೆಗಳ ಕುರಿತು.....

ಮಂಗಳೂರಿನಿಂದ ಪ್ರಕಟವಾಗುತ್ತಿರುವ ಯುಗ ರಶ್ಮಿಯು ಗಮನ ಧರ್ಮ ಸಾಮರಸ್ಯದ ಕಡೆಗಿದ್ದು, ಇಸ್ಲಾಂ ಧರ್ಮದ ಕುರಿತು ಕನ್ನಡ ನಾಡಿನ ಓದುಗರಿಗೆ ಸರಿಯಾಗಿ ಮಾಹಿತಿ ಒದಗಿಸುವಲ್ಲಿ ಇದು ಪ್ರಶಂಸನೀಯ ಕೆಲಸ ಮಾಡುತ್ತಿದೆ. ಏಸುಕ್ರಿಸ್ತನ ಮರಣದ ಬಗ್ಗೆ, ರಮ್ಜಾನ್ ವ್ರತಾನುಷ್ಠಾನ – ಮೊದಲಾದ ಒಳ್ಳೆಯ ಲೇಖನಗಳು ಆಸಕ್ತಿ ಕೆರಳಿಸುವಂತಿವೆ. ಮೂಢನಂಬಿಕೆ, ದುರಾಗ್ರಹ ಮೊದಲಾದ ಕತ್ತಲನ್ನು ಓಡಿಸುವಲ್ಲಿ ಯುಗ ರಶ್ಮಿ ಮುನ್ನಡೆಯಬೇಕು. ಅದಕ್ಕೆ ಓದುಗರ ಬೆಂಬ ಲವೂ ಬೇಕು.

—ನವಭಾರತ.

—o—o—o—

ಮಂಗಳೂರಿನಿಂದ ಪ್ರಕಟವಾಗುತ್ತಿರುವ ಯುಗ ರಶ್ಮಿ ತ್ರೈಮಾಸಿಕದಸಂಚಿಕೆಯಲ್ಲಿಧಾರ್ಮಿಕವಿಷಯಗಳನ್ನು ಪವಿತ್ರ ಖುರಾನಿನ ವಿವರಣೆಗಳನ್ನು ಧರ್ಮ ಪ್ರವಾದಿ ಗಳ ಸಂದೇಶಗಳನ್ನು, ತಿಳಿಗನ್ನಡದಲ್ಲಿ ಪ್ರಕಟಿಸಿ ಸಫಲರಾ ಗಿರುವ ಸಂಪಾದಕರು ಯುಗರಶ್ಮಿಯನ್ನು ಭಾವೈಕ್ಯತೆಯ ಸೇತು ಬಂಧವನ್ನಾಗಿಸಿದ್ದಾರೆ. ಧರ್ಮವು ಯಾವುದೇ ಜನಾಂಗ, ಪಕ್ಷ–ಪಂಗಡ ಕೋಮಿಗೆ ಸೀಮಿತವಾಗಿರದೆ ಪ್ರತಿಯೊಬ್ಬರೂ ಆಚರಿಸಲು ಯೋಗ್ಯವೆಂಬುದನ್ನು ಯುಗರಶ್ಮಿಯಲ್ಲಿ ಕಾಣಬಹುದು. ಇನ್ನೂ ಅನೇಕ ವಿಚಾರಲಹರಿಗಳು ಉಕ್ಕಿ ಹರಿಯಲಿ. ಜನ ತಣಿಯಲಿ. ಯುಗರಶ್ಮಿಯು ಚಿರಾಯುವಾಗಲಿ.

—"ಗೆಳೆಯ'', ದೈನಿಕ ಚಿಕ್ಕಮಗಳೂರು.

## ಅಹ್ಮದಿಯಾ ವಾರ್ತೆಗಳು

# ಅಹ್ಮದಿಯಾ ಕರೀಬಿಯನ್ ಕೌನ್ಸಿಲ್

ದಕ್ಷಿಣ ಅಮೇರಿಕದ ಗಿಯಾನಾ, ಟ್ರಿನಿಡಾಡ್, ಸೂರಿನಾಂ ಎಂಬೀ ರಾಜ್ಯಗಳ ಅಹ್ಮದಿಯಾ ಸಂಘಟನೆ ಗಳ ಕೇಂದ್ರ ಸಮಿತಿ 'ಅಹ್ಮದಿಯಾ ಕರೀಬಿಯನ್ ಕೌನ್ಸಿಲ್' ಎಂಬ ಹೆಸರಿನಲ್ಲಿ ರೂಪೀಕರಿಸಲ್ಪಟ್ಟಿದೆ.

1975 ಡಿಸೆಂಬರ್ 27ರಂದು ನಡೆದ ಟ್ರಿನಿಡಾಡ್ ಅಹ್ಮದಿಯಾ ಸಮ್ಮೇಳನದ ಅಂಗವಾಗಿ ಪ್ರತಿನಿಧಿ ಸಮ್ಮೇ ಳನವು ಜರಗಿ ಕೌನ್ಸಿಲನ್ನು ರೂಪೀಕರಿಸಲು ತೀರ್ಮಾನಿಸ ಲಾಯಿತು. ಗಿಯಾನಾ ಅಹ್ಮದಿಯಾ ಮುಬಲ್ಲಿಗ್ ಮೌಲಾನಾ ಮುಹಮ್ಮದ್ ಅಸ್ಲಂ ಖುರೈಷಿ, ಟ್ರಿನಿ ಡಾಡ್ ಅಹ್ಮದಿಯಾ ಮುಬಲ್ಲಿಗ್ ಮೌಲಾನಾ ಮುಹ ಮ್ಮದ್ ಹನೀಫ್ ಯಾಕೂಬ್, ಸೂರಿನಾಂ ಅಹ್ಮದಿಯಾ ಮುಬಲ್ಲಿಗ್ ಮೌಲಾನಾ ಮುಹಮ್ಮದ್ ಸಿದ್ದೀಖ್ ಸಾ ಹೆಬ್ ಇವರ ಮುಂದಾಳುತನದಲ್ಲಿ ಮೂರು ಮಿಷ್ಯನ್ ಕೇಂದ್ರಗಳ ಪ್ರತಿನಿಧಿ ಸಂಘಗಳು ಸಮ್ಮೇಳನದಲ್ಲಿ ಭಾಗ ವಹಿಸಿದುವು.

ಜಮೈಕಾ, ಗರ್‌ನೀಸಾ, ಬಾರ್ಬಡೋಸ್ ಎಂಬೀ ಸ್ಥಳಗಳಲ್ಲಿ ಹೊಸ ಮಿಷ್ಯನ್ ಕೇಂದ್ರಗಳನ್ನು ಸ್ಥಾಪಿಸ ಲಿಕ್ಕೂ ಜಾರ್ಜ್‌ಟೌನಿನಲ್ಲಿ ಮಸೀದಿ ಮತ್ತು ಮಿಷ್ಯನ್ ಹೌಸ್ ನಿರ್ಮಿಸಲಿಕ್ಕೂ ಕೌನ್ಸಿಲ್ ತೀರ್ಮಾನಿಸಿತು.

ದಕ್ಷಿಣ ಅಮೇರಿಕದಲ್ಲಿ ಕಳೆದ 20 ವರ್ಷಗಳಿಂದ ಅಹ್ಮದಿಯಾ ಮಿಷ್ಯನ್ ಪ್ರವರ್ತಿಸುತ್ತಿದೆ. ಸೂರಿನಾಮಿ ನಲ್ಲಿ ಅಹ್ಮದಿಯರ ಒಂದು ಮಸೀದಿ ಮತ್ತು ಮಿಷ್ಯನ್ ಹೌಸ್ ಇವೆ. ಗಿಯಾನಾದಲ್ಲಿ ಎರಡು ಮಸೀದಿಗಳು ಈಗಾಗಲೆ ನಿರ್ಮಿಸಲ್ಪಟ್ಟಿವೆ. ಮೂರನೆಯ ಮಸೀದಿ ಯ ನಿರ್ಮಾಣವು ಪ್ರಗತಿಗೊಳ್ಳುತ್ತಿದೆ. ಟ್ರಿನಿಡಾಡ್ ನಲ್ಲಿ ಮೂರು ಮಸೀದಿಗಳೂ ಮಿಷ್ಯನ್ ಹೌಸ್‌ಗಳೂ ಲೈಬ್ರರಿಗಳೂ ಇವೆ.

••••••••

# ವಿದೇಶಗಳಲ್ಲಿ 29 ಹೊಸ ಕೇಂದ್ರಗಳು; 500 ಮಸೀದಿಗಳು

ಅಹ್ಮದಿಯಾ ಸಂಘಟನೆಯು ತ್ವರಿತಗತಿಯಲ್ಲಿ ಪ್ರಗತಿಗೊಳ್ಳುತ್ತಿದೆಯೆಂದೂ ಈ ವರ್ಷ ವಿದೇಶಗಳಲ್ಲಿ 29 ಹೊಸ ಶಾಖಾಕೇಂದ್ರಗಳನ್ನು ಸ್ಥಾಪಿಸಲಾಗಿದೆಯೆಂದೂ ವಿದೇಶಗಳಲ್ಲಿ ಇಷ್ಟರ ತನಕ ಸುಮಾರು ಐನೂರು ಮಸೀದಿಗಳು ನಿರ್ಮಿಸಲ್ಪಟ್ಟಿವೆಯೆಂದೂ 'ತಹ್‌ರೀಕ್ ಜದೀದ್' ವಿಭಾಗದ ಸಾಧನೆಗಳನ್ನು ವಿವರಿಸುತ್ತಾ ಅಹ್ಮದಿಯಾ ಜಮಾಅತಿನ ಮೂರನೆಯ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೆಬರು ರಬ್ವಾದಲ್ಲಿ ಜರಗಿದ ಜಾಗತಿಕ ಅಹ್ಮದಿಯಾ ಸಮ್ಮೇಳನದಲ್ಲಿ ಪ್ರಸ್ತಾಪಿಸಿರುವರು.

ಸಮ್ಮೇಲನದಲ್ಲಿ ಸುಮಾರು $1\frac{1}{2}$ ಲಕ್ಷ ಪ್ರತಿನಿಧಿಗಳು ಭಾಗವಹಿಸಿದ್ದರು. ಪ್ರಪಂಚದ ನಾನಾ ಭಾಗಗಳಿಂದ ಪ್ರತಿನಿಧಿಗಳು ಸಮ್ಮೇನದಲ್ಲಿ ಪಾಲುಗೊಂಡಿದ್ದರು.

# ಘಾನಾದಲ್ಲಿ ಅಹ್ಮದಿಯಾ ಪ್ರದರ್ಶನ

ಘಾನಾದ ಅಕ್ರಾದಲ್ಲಿ ನಡೆದ ಅಂತಾರಾಷ್ಟ್ರೀಯ ವಾಣಿಜ್ಯ ಪ್ರದರ್ಶನದಲ್ಲಿ ಏರ್ಪಡಿಸಲಾದ ಅಹ್ಮದಿಯಾ ಸ್ಟಾಲನ್ನು 10 ಲಕ್ಷ ಜನರು ಸಂದರ್ಶಿಸಿರುವರೆಂದು ಸಾಲ್ಟ್‌ಪೋಂಡಿನ ಒಂದು ವರದಿಯು ಹೇಳುತ್ತದೆ.

15 ದಿನಗಳ ಈ ಪ್ರದರ್ಶನದಲ್ಲಿ 29 ರಾಜ್ಯಗಳ 273 ಸಂಸ್ಥೆಗಳು ಭಾಗವಹಿಸಿದುವು.

ಅಹ್ಮದಿಯಾ ಸಂಘಟನೆಯು ಏರ್ಪಡಿಸಿದ ಸ್ಟಾಲಿನಲ್ಲಿ ಲೋಕದ ನಾನಾ ಭಾಗಗಳಲ್ಲಿ ನಡೆಯುತ್ತಿರುವ ಅಹ್ಮದಿಯಾ ಪ್ರವರ್ತನೆಗಳನ್ನು ಚಿತ್ರೀಕರಿಸುವ ಪಟಗಳನ್ನೂ ಚಾರ್ಟುಗಳನ್ನೂ ಪ್ರದರ್ಶಿಸಲಾಯಿತು.

# ಕೇರಳ ಅಹ್ಮದಿಯಾ ಸಮ್ಮೇಳನ

ಕೇರಳ ಅಹ್ಮದಿಯಾ ವಾರ್ಷಿಕ ಸಮ್ಮೇಳನವು 1976 ಎಪ್ರಿಲ್ 10, 11 ದಿನಾಂಕಗಳಲ್ಲಿ (ಶನಿವಾರ, ಆದಿತ್ಯವಾರ) ಕಲ್ಲಿಕೋಟೆಯಿಂದ ಸುಮಾರು 70 ಮೈಲುಗಳಷ್ಟು ದೂರವಿರುವ ವಾಣಿಯಂಬಲದಲ್ಲಿ ನಡೆಯಲಿದೆ. ಹೈದರಾಬಾದಿನ ಉಸ್ಮಾನಿಯಾ ಯೂನಿವರ್ಸಿಟಿಯ ಎಸ್ಟ್ರಾನಮಿ ವಿಭಾಗದ ಮುಖ್ಯಸ್ಥ ಡಾ। ಹಾಫಿಜ್ ಸಾಲಿಹ್ ಮುಹಮ್ಮದ್ ಅಲಾವುದ್ದೀನ್ M Sc , Ph D. ಇವರು ಸಮ್ಮೇಳನವನ್ನು ಉದ್ಘಾಟಿಸುವರು. ಮತ ಸೌಹಾರ್ದ, ಅಹ್ಮದಿಯಾ ಸಂಘಟನೆಯ ಧ್ಯೇಯ ಧೋರಣೆಗಳು, ಲೋಕ ಶಾಂತಿಗಾಗಿ ಇಸ್ಲಾಮಿನ ಕೊಡುಗೆ, ಆಧುನಿಕ ಲೋಕದ ಸಮಸ್ಯೆಗಳಿಗೆ ಇಸ್ಲಾಮಿನ ಪರಿಹಾರ ಮಾರ್ಗಗಳು, ವಿಜ್ಞಾನ ಮತ್ತು ಖುರ್‌ಆನ್ ಎಂಬೀ ವಿಷಯಗಳ ಕುರಿತು ಭಾಷಣಗಳು ನಡೆಯಲಿವೆ. ಪ್ರತಿದಿನ ಸಾಯಂಕಾಲ 4-30ಕ್ಕೆ ಸಮ್ಮೇಳನವು ಆರಂಭಗೊಳ್ಳುವುದು.

ಪುಸ್ತಕ ವಿಭಾಗ

# ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?

ಲೇಖಕ: ಮೌಲಾನ ಜಲಾಲುದ್ದೀನ್ ಶಮ್ಸ್, ಲಂಡನ್.

ಭಾಷಾಂತರಕಾರ: ಅಬೂ ತಾಹಿರ್.

## ಅಧ್ಯಾಯ—4

## ಆದಿಕಾಲೀನ ಚಾರಿತ್ರಿಕ ಸಾಕ್ಷ್ಯಗಳು

ಕ್ರಿ. ಶ. 1907ನೇ ಇಸವಿಯಲ್ಲಿ ಚಿಕಾಗೋ ನಗರದ ಇಂಡೋ-ಅಮೇರಿಕನ್ ಬುಕ್ ಕಂಪೆನಿ "ದಿ ಕ್ರುಸಿಫಿಕ್ಷನ್ ಬೈ ಏನ್ ಐ ವಿಟ್‌ನೆಸ್'' (ಪ್ರತ್ಯಕ್ಷ ಸಾಕ್ಷಿಯಿಂದ ಶಿಲುಬೆಯ ಸಂಭವದ ವಿವರಣೆ) ಎಂಬ ಒಂದು ಪುಸ್ತಕವನ್ನು ಪ್ರಸಿದ್ಧಗೊಳಿಸಿತು. ಈ ಪುಸ್ತಕದಲ್ಲಿ ಎಲೆಕ್ಸಾಂಡ್ರಾ ನಗರದ "ಎಸ್ಸೀನ್'' ಎಂಬ ಭ್ರಾತೃ ಸಂಘದವರಿಗೆ ಸೇರಿದ ಪುರಾತನ ಮನೆಯಲ್ಲಿ ದೊರೆತ ಒಂದು ಪತ್ರವು ಪ್ರಸಿದ್ಧವಾಗಿದ್ದಿತು. ಈ ಪತ್ರವು ಯೇಸು ಕ್ರಿಸ್ತರ ಶಿಲುಬೆಯ ಸಂಭವ ಕಳೆದು ಏಳು ವರ್ಷಗಳ ನಂತರ ಯೆರೊಸಲೇಮಿನ ಎಸ್ಸೀನ್ ಸಂಘದ ಸದಸ್ಯರಿಗೆ ಕಳುಹಿಸಿದುದಾಗಿತ್ತು. ಇದು ಎಲೆಕ್ಸಾಂಡ್ರಾದ ಎಸ್ಸೀನ್ ಸಂಘದ ನಾಯಕನು (Terapeut) ಯೇಸುಕ್ರಿಸ್ತರ ಹುತಾತ್ಮತೆಯ ಕುರಿತು ವಿಚಾರಿಸಿ ಬರೆದ ಪತ್ರಕ್ಕೆ ಉತ್ತರವಾಗಿದ್ದಿತು. ಯೇಸುಕ್ರಿಸ್ತರು ತಮ್ಮ ಸಂಘದ ನಿಯಮಾನುಸಾರ ನಡೆಯುವವರಾಗಿದ್ದರೆಂದು ಅವರಿಗೆ ತಿಳಿದಿದ್ದಿತ್ತು.

ಈ ಪತ್ರದಿಂದ ಯೇಸುಕ್ರಿಸ್ತರು ಎಸ್ಸೀನ್ ಭ್ರಾತೃ ಸಂಘ (Esseens Brotherhood)ದ ಸದಸ್ಯರಾಗಿದ್ದರೆಂದು ತಿಳಿಯುತ್ತದೆ. ಪತ್ರ ಬರೆದ ವ್ಯಕ್ತಿ ಎಲೆಕ್ಸಾಂಡ್ರಾದ ಸಂಘ ಸದಸ್ಯರಿಗೆ ಈ ರೀತಿ ಬರೆದಿರುವನು: "ನಾನು ನಿಮಗೆ ನನಗೆ ಗೊತ್ತಿರುವ ಸಂಗತಿಗಳನ್ನು ಮಾತ್ರ ಬರೆಯುತ್ತೇನೆ. ನಾನು ಅವುಗಳನ್ನು ನನ್ನ ಸ್ವಂತ ಕಣ್ಣುಗಳಿಂದ ಕಂಡಿರುತ್ತೇನೆ. ನಾನು ಗಾಢವಾದ ಶ್ರದ್ಧೆವಹಿಸಿ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುತ್ತೇನೆ''. (ಪುಟ 38)

### ಅಂಧಕಾರವು ಭೂಮಿಯಲ್ಲಿ ವ್ಯಾಪಿಸಿತು

ಯೇಸುಕ್ರಿಸ್ತರನ್ನು ಶಿಲುಬೆಗೆ ಕೊಟ್ಟಾಗ ಮತ್ತು ಇಳಿಸಿದಾಗ ನಡೆದ ಘಟನೆಗಳನ್ನು ಪತ್ರ ಲೇಖಕನು ಈ ರೀತಿ ನಿರೂಪಿಸುತ್ತಾನೆ: ಯೇಸುಕ್ರಿಸ್ತರು ಶಿಲುಬೆಗೆ ಏರಿಸಲ್ಪಟ್ಟಾಗ "ಅಂಧಕಾರವು ಭೂಮಿಯಲ್ಲಿ ವ್ಯಾಪಿಸಿತು ಮತ್ತು ಜನರು ಯೆರೋಸಲೇಮಿಗೆ ಹಿಂತಿರುಗಿದರು''. ಮುಂದುವರಿಯುತ್ತಾ ಆ ಪತ್ರದಲ್ಲಿ ಈ ರೀತಿ ಬರೆಯಲಾಗಿದೆ: "ಯೇಸುಕ್ರಿಸ್ತರು ದೊಡ್ಡದಾದ ಧ್ವನಿಯೊಂದಿಗೆ ತನ್ನ ವೇದನೆಯ ತೀವ್ರತೆಯನ್ನು ವ್ಯಕ್ತಗೊಳಿಸುತ್ತಾ ಇಪ್ಪತ್ತೆರಡನೆಯ ಕೀರ್ತನೆಯ ಶಬ್ದಗಳನ್ನು ಪುನರುಚ್ಚರಿಸಿ ತನ್ನನ್ನು ಸಂಕಟದಿಂದ ಪಾರು ಮಾಡಲು ದೇವರನ್ನು ಪ್ರಾರ್ಥಿಸಿದರು''. (ಪುಟ 62)

### ಭೂಕಂಪಗಳು

ಆ ಪತ್ರದಲ್ಲಿ ಈ ಪ್ರಕಾರವೂ ಬರೆದಿದೆ: "ಉಷ್ಣವು ಎಡೆಬಿಡದೆ ಹೆಚ್ಚಾಗಲು ತೊಡಗಿ, ಅದು ಬಹಳ ಅಸಹ್ಯವಾಯಿತು. ಭೂಮಿಯಲ್ಲೂ ಗಾಳಿಯಲ್ಲೂ

ಒಂದು ಬೆಂಕಿಯು ಎಲ್ಲಾ ವಸ್ತುಗಳನ್ನು ಶುದ್ಧೀಕರಿಸಲು ಬರುವಂತೆ ತೋರಿತು. ಎಸ್ಸೀನ್ ಭ್ರಾತೃ ಸಂಘದವರಿಗೆ ಪ್ರಕೃತಿ ಮತ್ತು ಅದರ ಮೂಲಭೂತ ವಸ್ತುಗಳ ಜ್ಞಾನದಿಂದಾಗಿ ಒಂದು ಭೂಕಂಪವು ಹಿರಿಯರ ಕಾಲದಲ್ಲಿ ನಡೆದಂತೆ ಸಂಭವಿಸುವುದೆಂದು ತಿಳಿದಿತ್ತು." (ಪುಟ 62).

"ರಾತ್ರಿಯಾಗಲು ತೊಡಗುವಾಗ ಭೂಮಿಯು ಬಲವಾಗಿ ಕಂಪಿಸಿತು ಮತ್ತು ರೋಮನ್ ಶತಾಧಿಪತಿಯು ಹೆದರಿಕೆಯಿಂದ ತನ್ನ ಕುಲದೈವಗಳನ್ನು ಪ್ರಾರ್ಥಿಸಿದನು. ಹೆದರಿದ ಜನರಲ್ಲಿ ಹೆಚ್ಚಿನವರು ಯೆರೋಸಲೇಮಿಗೆ ಹಿಂತಿರುಗಿದರು. ಬಹಳ ಕರುಣೆಯಿಂದ ಕೂಡಿದ ಉತ್ತಮ ವ್ಯಕ್ತಿಯಾದ ಶತಾಧಿಪತಿಯು ಯೇಸುಕ್ರಿಸ್ತರ ತಾಯಿಯನ್ನು ಶಿಲುಬೆಯ ಸಮೀಪಕ್ಕೆ ಕರೆದುಕೊಂಡು ಹೋಗಲು ಯೋಹಾನನಿಗೆ ಅನುಮತಿಯನ್ನಿತ್ತನು." (ಪುಟ 62)

"(ಯೇಸುಕ್ರಿಸ್ತರು) ತನ್ನ ತಾಯಿಯನ್ನು ಯೋಹಾನ್ನನ ಮೇಲ್ನೋಟಕ್ಕೆ ಒಪ್ಪಿಸಿದಾಗ ಪೂರ್ಣಚಂದ್ರನು ಆಕಾಶದಲ್ಲಿ ಬೆಳಗುತ್ತಾ ಇರಬೇಕಾದ ಆ ಸಮಯದಲ್ಲಿ ಅಂಧಕಾರವು ಇನ್ನೂ ವ್ಯಾಪಿಸುತ್ತಿತ್ತು. ಸತ್ತ ಸಮುದ್ರದಿಂದ (Dead Sea) ದಟ್ಟವಾದ ಕೆಂಪು ಹೊಗೆಯು ಹೊರಡುವಂತೆ ಕಂಡಿತು. ಸುತ್ತಲಿರುವ ಪರ್ವತಗಳು ಭಯಂಕರವಾಗಿ ಕಂಪಿಸಿದುವು ಮತ್ತು ಯೇಸುಕ್ರಿಸ್ತರ ತಲೆಯು ಅವರ ಎದೆಯ ಮೇಲೆ ಬಾಗಿತು. ತನ್ನ ವೇದನೆಯ ಮತ್ತು ಸಂಕಟದ ಕೊನೆಯ ಉದ್ಗಾರವನ್ನು ಹೊರಡಿಸಿ ಅವರು ತೀರಿಹೋದಾಗ ಒಂದು ಭೀಭತ್ಸ ಶಬ್ದವು ಗಾಳಿಯಲ್ಲಿ ಕೇಳಿಸಿತು. ಯೆಹೂದ್ಯರು ಬಹಳ ಭಯಭೀತರಾದರು. ಏಕೆಂದರೆ ಆಕಾಶ ಭೂಮಿಗಳ ಮಧ್ಯವಿರುವ ಕೆಟ್ಟ ಪಿಶಾಚಿಗಳು ಮನುಷ್ಯರನ್ನು ಶಿಕ್ಷಿಸಲು ಹೊರಟಿವೆಯೆಂದು ಅವರು ಭಾವಿಸಿದರು. ಅದು ಭೂಕಂಪವು ತೊಡಗುವ ಮೊದಲು ಗಾಳಿಯಲ್ಲಿ ವ್ಯಾಪಿಸುವ ಅಸಾಧಾರಣವೂ ವಿಚಿತ್ರವೂ ಆದ ಶಬ್ದವಾಗಿತ್ತು.

ಯಹೂದ್ಯರು ಈ ಸಂಭವಗಳು ಪ್ರಕೃತಿಗೆ ವ್ಯತಿರಿಕ್ತವಾಗಿ ಸಂಭವಿಸುವ ವಿಶೇಷ ಸಂಭವಗಳೆಂದು ಭಾವಿಸುತ್ತಿರುವಾಗ ರೋಮನ್ ಶತಾಧಿಪತಿಯು ಯೇಸುಕ್ರಿಸ್ತರ ದಿವ್ಯತೆ ಮತ್ತು ನಿರಪರಾಧಿತ್ವದಲ್ಲಿ ವಿಶ್ವಾಸಗೊಂಡು ಅವರ ತಾಯಿಯನ್ನು ಸಮಾಧಾನಗೊಳಿಸಿದನು.

"ಪ್ರಿಯ ಸೋದರರೇ, ನಾವು ನಮ್ಮ ಸ್ನೇಹಿತನನ್ನು ಗುಪ್ತ ವಿಧಾನಗಳಿಂದ ರಕ್ಷಿಸಲು ಶ್ರಮಿಸದುದಕ್ಕೆ ನಮ್ಮನ್ನು ನೀವು ನಿಂದಿಸಿರುವಿರಿ. ಆದರೆ ನಮ್ಮ ಸಂಘದ ನಿಯಮಗಳು ಬಹಿರಂಗವಾಗಿ ಯಾವುದೇ ಕಾರ್ಯದಲ್ಲಿ ಮುಂದುವರಿಯುವುದನ್ನು ಮತ್ತು ರಾಜ್ಯಾಡಳಿತದಲ್ಲಿ ಕೈಹಾಕುವುದನ್ನು ತಡೆಯುತ್ತವೆ ಎಂಬುದನ್ನು ಇಲ್ಲಿ ನಾನು ನಿಮ್ಮ ಸ್ಮರಣೆಗೆ ತರಬೇಕಾಗಿದೆ." (ಪುಟ 66)

## ಯೋಸೆಫ ಮತ್ತು ನಿಕೋದೇಮ

"ಅರಿಮಥಾಯದ ಯೋಸೆಫನು ಯೇಸುಕ್ರಿಸ್ತರಿಗೆ ಮಾಡಿದ ಸಹಾಯವನ್ನು ವಿವರಿಸುತ್ತಾ ಪತ್ರವು ಈ ರೀತಿ ಹೇಳುತ್ತದೆ:- "ಅರಿಮಥಾಯದ ಯೋಸೆಫನು ಶ್ರೀಮಂತನಾಗಿದ್ದು ಆತನು ಪ್ರತಿನಿಧಿ ಸಭೆಯ ಸದಸ್ಯನಾದ ಕಾರಣ ಜನರೆಡೆಯಲ್ಲಿ ಆದರಕ್ಕೆ ಪಾತ್ರನಾಗಿದ್ದನು. ಆತನು ಯಾವುದೇ ಪಕ್ಷಕ್ಕೆ ಸೇರದವನಾಗಿರದಿದ್ದರೂ ನಮ್ಮ ಪಂಗಡದ ಗುಪ್ತ ಸದಸ್ಯನಾಗಿದ್ದು ನಮ್ಮ ನಿಯಮಗಳನ್ನು ಅನುಸರಿಸುತ್ತಿದ್ದನು. ಆತನ ಸ್ನೇಹಿತ ನಿಕೋದೇಮನು ವಿದ್ಯಾವಂತನಾಗಿದ್ದು ನಮ್ಮ ಸಂಘದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದನು. ಆತನಿಗೆ ವೈದ್ಯಶಾಸ್ತ್ರ ತಿಳಿದಿತ್ತು ಮತ್ತು ಆತನು ಹೆಚ್ಚಾಗಿ ನಮ್ಮ ಜೊತೆಯಲ್ಲೇ ಇರುತ್ತಿದ್ದನು. (ಪುಟ 66)

"ಭೂಕಂಪದ ಬಳಿಕ ಹೆಚ್ಚಿನ ಜನರು ಹೊರಟುಹೋದ ನಂತರ ಯೋಸೆಫನೂ ನಿಕೋದೇಮನೂ ಶಿಲುಬೆಯ ಸಮೀಪ ಬಂದರು. ಶಿಲುಬೆಗೆ ಕೊಡಲ್ಪಟ್ಟ ಯೇಸುಕ್ರಿಸ್ತರು ತೀರಿ ಹೋದ ಸಂಗತಿ ನಮ್ಮ ಭ್ರಾತೃ ಸಂಘದ ತೋಟದಲ್ಲಿ (ಅದು ಶಿಲುಬೆಗೆ ಕೊಡಲ್ಪಟ್ಟ ಸ್ಥಳದ ಹತ್ತಿರವೇ ಇತ್ತು) ಇದ್ದಾಗ ಅವರಿಗೆ ತಿಳಿಯಿತು.

'ಕೇವಲ ಏಳು ಗಂಟೆಗಳಿಗಿಂತ ಕಮ್ಮಿ ಸಮಯ ಶಿಲುಬೆಯಲ್ಲಿ ತೂಗಿದ್ದ ಯೇಸುಕ್ರಿಸ್ತರು ತೀರಿಹೋದ ಸಂಗತಿ ಅವರಿಗೆ ವಿಚಿತ್ರವಾಗಿ ಕಂಡಿತು. ಅವರಿಗೆ ಅದನ್ನು ನಂಬಲು ಸಾಧ್ಯವಾಗಲಿಲ್ಲ. ಅವರು ಅವಸರವಸರವಾಗಿ ಅಲ್ಲಿಗೆ ಹೋದರು. ಅಲ್ಲಿ ಯೋಹಾನನು ಒಬ್ಬನೇ ಮಾತ್ರ ಇದ್ದನು."

"ಯೋಸೇಫನೂ ನಿಕೋದೇಮನೂ ಯೇಸುಕ್ರಿಸ್ತರ ದೇಹವನ್ನು ಪರೀಕ್ಷಿಸಿದರು ಮತ್ತು ನಿಕೋದೇಮನು ವಿಶೇಷವಾಗಿ ಪ್ರಭಾವಿತನಾಗಿ ಯೋಸೇಫನನ್ನು

ಒಂದು ಬದಿಗೆ ಕರೆದುಕೊಂಡು ಹೋಗಿ ಹೇಳಿದನು. "ಜೀವನ ಮತ್ತು ಪ್ರಕೃತಿಯ ಕುರಿತು ನನ್ನ ಜ್ಞಾನವು ದೃಢವಾಗಿರುವ ಹಾಗೆಯೇ ಇವರನ್ನು ರಕ್ಷಿಸುವುದು ಸಾಧ್ಯವೆಂದು ದೃಢವಾಗಿ ಹೇಳಬಹುದು" (ಪುಟ 67)

ನಿಕೋದೇಮನು ದೊಡ್ಡ ಸ್ವರದಲ್ಲಿ ಹೇಳಿದನು: "ಆತನ ಶರೀರವು ಎಲುಬುಗಳು ಮುರಿಯಲ್ಪಡದೆ ನಮಗೆ ಕೂಡಲೇ ಸಿಗಬೇಕು. ಏಕೆಂದರೆ, ಆತನನ್ನು ಈಗಲೂ ರಕ್ಷಿಸಬಹುದು". ಆತನು ತನ್ನ ಅಜಾಗರೂಕತೆಯನ್ನು ಗಮನಿಸಿ ಪಿಸುಗುಟ್ಟುತ್ತಾ ಈ ರೀತಿ ನುಡಿದನು: "ಆತನನ್ನು ಅಪ್ರಸಿದ್ಧವಾದ ಹೂಳುವಿಕೆಯಿಂದ ರಕ್ಷಿಸಬಹುದು' (ಪುಟ 68) ಅವರು ಈ ಸಂಗತಿಯನ್ನು ಗುಪ್ತವಾಗಿರಿಸಿದರು. ಯೋಹಾನನಿಗೆ ಈ ಸಂಗತಿಯ ಕುರಿತು ಏನೂ ಹೇಳಲಿಲ್ಲ.

"ಯೋಸೇಫನು ತನ್ನ ಸ್ವಂತ ಕೆಲಸಗಳನ್ನು ಬದಿಯಲ್ಲಿರಿಸಿ, ಕೂಡಲೇ ಪಿಲಾತನ ಬಳಿಗೆ ಹೋಗಿ ಶಿಲುಬೆಗೇರಿಸಿದ ಯೇಸುಕ್ರಿಸ್ತರ ಶರೀರವನ್ನು ಅದೇ ರಾತ್ರಿ ಶಿಲುಬೆಯಿಂದ ಇಳಿಸಿ ಆತನ ಅಧೀನದಲ್ಲಿರುವ ಬಂಡೆಯಲ್ಲಿ ಕೊರೆದ ಸಮಾಧಿಯೊಳಗಿರಿಸುವ ಏರ್ಪಾಡು ಮಾಡುವಂತೆ ನಿಕೋದೇಮನು ಯೋಸೇಫನನ್ನು ಒಪ್ಪುವಂತೆ ಮಾಡಿದನು."

"ನಾನು ನಿಕೋದೇಮನ ಉದ್ದೇಶವನ್ನು ಗ್ರಹಿಸಿ ಸೈನಿಕರು ಯೇಸುಕ್ರಿಸ್ತರ ಎಲುಬುಗಳನ್ನು ಮುರಿಯದಂತೆ ತಡೆಯಲು ಯೋಹಾನನ ಜೊತೆಯಲ್ಲಿ ಶಿಲುಬೆಯ ಕಾವಲಿಗೆ ನಿಂತೆನು." (ಪುಟ 68)

"ಶಿಲುಬೆಗೆ ಕೊಡಲ್ಪಟ್ಟು ಹೂಳಲು ಅನುಮತಿಸಲ್ಪಟ್ಟ ಶರೀರಗಳ ಎಲುಬುಗಳನ್ನು ಮುರಿಯಲು ಸೈನಿಕರಿಗೆ ಆಜ್ಞೆ ಕೊಡಬೇಕೆಂದು ಯಹೂದ್ಯರ ಸಭೆಯು ಪಿಲಾತನಿಗೆ ಮನವಿಯನ್ನರ್ಪಿಸಿದ್ದಿತು." (ಪುಟ 69)

ಯೋಸೇಫನೂ ನಿಕೋದೇಮನೂ ಹೊರಟ ನಂತರ ಒಬ್ಬ ಸಂದೇಶವಾಹಕನು ಶತಾಧಿಪತಿಗೆ ಒಂದು ಆಜ್ಞೆ ತಂದನು. ಶಿಲುಬೆಗೆ ಕೊಡಲ್ಪಟ್ಟ ಶರೀರಗಳನ್ನು ಇಳಿಸಿ ಹೂಳಬೇಕೆಂದು ಆ ಆಜ್ಞೆಯಲ್ಲಿದ್ದಿತು. ಪತ್ರದ ಲೇಖಕ ಈ ರೀತಿ ಬರೆದಿರುವನು: "ಆ ಸಂದೇಶವಾಹಕನು ಬಂದಾಗ ನಾನು ಆತನ ಸಮೀಪಕ್ಕೆ ವೇಗವಾಗಿ ಹೋಗಿ ಇಷ್ಟರಲೇ ಯೋಸೇಫನು ಪಿಲಾತನನ್ನು ಕಂಡಿರಬಹುದೆಂದು ಆಶಿಸುತ್ತಾ (ಅದು ಅಸಾಧ್ಯವೆಂದು ತಿಳಿದಿದ್ದರೂ) ಈ ರೀತಿ ಕೇಳಿದನು: "ನಿನ್ನನ್ನು ಪಿಲಾತನು ಕಳುಹಿಸಿರುವನೋ?" ಅವನು ಈ ರೀತಿ ಉತ್ತರಿಸಿದನು: "ನನ್ನನ್ನು ಪಿಲಾತನು ಕಳುಹಿಸಿಲ್ಲ. ಇಂತಹ ಪ್ರಧಾನವಲ್ಲದ ವಿಷಯಗಳ ಕುರಿತು ಗವರ್ನರನ ಪರವಾಗಿ ಕೆಲಸ ಮಾಡುವ ಕಾರ್ಯದರ್ಶಿಯು ನನ್ನನ್ನು ಕಳುಹಿಸಿರುವನು"

"ಶತಾಧಿಪತಿಯು ನನ್ನ ಉದ್ವೇಗವನ್ನು ಕಂಡು ನನ್ನ ಕಡೆಗೆ ನೋಡಿದನು. ನಾನು ಒಬ್ಬ ಸ್ನೇಹಿತನಂತೆ ಆತನೊಡನೆ, "ಈ ಶಿಲುಬೆಗೆ ಕೊಡಲ್ಪಟ್ಟ ವ್ಯಕ್ತಿ ಸಾಮಾನ್ಯನಲ್ಲ. ಆತನೊಡನೆ ಅಯೋಗ್ಯವಾಗಿ ವರ್ತಿಸಬೇಡಿ. ಒಬ್ಬ ಶ್ರೀಮಂತನು ಪಿಲಾತನ ಬಳಿಗೆ ಹೋಗಿ ಶರೀರದ ಪ್ರತಿಫಲವಾಗಿ ಹಣವನ್ನಿತ್ತು ಶರೀರವನ್ನು ಬಿಡಿಸಿ ಯೋಗ್ಯ ರೀತಿಯಲ್ಲಿ ಸಮಾಧಿ ಮಾಡುವ ಏರ್ಪಾಡಿಸಲ್ಲಿರುವನು" ಎಂದೆನು.

"ನನ್ನ ಪ್ರಿಯ ಸಹೋದರರೇ, ಪಿಲಾತನು ಶಿಲುಬೆಗೆ ಕೊಡಲ್ಪಟ್ಟವರ ಶರೀರಗಳನ್ನು ಸಮಾಧಿ ಮಾಡಲು ಅವರ ಸ್ನೇಹಿತರಿಗೆ ಮಾರುತ್ತಿದ್ದನು. ಶತಾಧಿಪತಿಯು ನಡೆದ ಸಂಭವಗಳಿಂದ ಪ್ರಭಾವಿತನಾಗಿ ಯೇಸುಕ್ರಿಸ್ತರ ನಿರಪರಾಧಿತ್ವದಲ್ಲಿ ವಿಶ್ವಾಸವುಳ್ಳವನಾಗಿದ್ದು ನನ್ನೊಡನೆ ಸ್ನೇಹ ತೋರಿಸಿದನು. ಇಬ್ಬರು ಕಳ್ಳರನ್ನು ಸೈನಿಕರು ಬಲವಾಗಿ ಹೊಡೆಯುತ್ತಾ ಅವರ ಎಲುಬುಗಳನ್ನು ಮುರಿದಾಗ ಶತಾಧಿಪತಿಯು ಸೈನಿಕರ ಬಳಿಗೆ ಯೇಸುಕ್ರಿಸ್ತರ ಶಿಲುಬೆಯನ್ನು ದಾಟಿ ಹೋಗಿ "ಅವನ ಎಲುಬುಗಳನ್ನು ಮುರಿಯಬೇಡಿರಿ, ಆತನು ಸತ್ತಿರುವನು" ಎಂದು ಹೇಳಿದನು. (ಪುಟ 70)

ಸ್ವಲ್ಪವೇ ಸಮಯದ ನಂತರ ಒಬ್ಬ ದೂತನು ಪಿಲಾತನ ಬಳಿಯಿಂದ ಬಂದು ಶತಾಧಿಪತಿಯೊಡನೆ ಕೇಳಿದನು: "ಯೇಸು ನಿಜವಾಗಿಯೂ ಸತ್ತಿರುವನೋ ಎಂದು ತಿಳಿಯಲು ಪಿಲಾತನು ಇಚ್ಛಿಸುತ್ತಾನೆ". "ಹೌದು, ಆತನು ಸತ್ತಿರುವನು. ಆದುದರಿಂದಲೇ ನಾವು ಆತನ ಎಲುಬುಗಳನ್ನು ಮುರಿದಿಲ್ಲ" ಎಂದು ಶತಾಧಿಪತಿ ಉತ್ತರಿಸಿದನು.

ಹೆಚ್ಚು ದೃಢವಾಗಲು ಒಬ್ಬ ಸೈನಿಕನು ಯೇಸುಕ್ರಿಸ್ತರ ಶರೀರದ ಮಧ್ಯದಿಂದ ಮೇಲ್ಭಾಗದ ಬದಿಗೆ ತನ್ನ ಈಟಿ ನಾಟುವಂತೆ ಮಾಡಿದನು. ಶರೀರವು ಯಾವುದೇ ಚಲನೆಯನ್ನು ತೋರಿಸಲಿಲ್ಲ. ಇದು ಆತನು ತೀರಿ ಹೋದುದನ್ನು ಸೂಚಿಸುವ ಖಂಡಿತವಾದ ಸೂಚನೆ

ಯೆಂದು ಶತಾಧಿಪತಿಯು ಗ್ರಹಿಸಿ ತನ್ನ ವರದಿಯನ್ನು ಬರೆಯಲು ಅವಸರವಸರವಾಗಿ ಹೋದನು.

"ಆ ಚಿಕ್ಕ ಗಾಯದಿಂದ ರಕ್ತ ಮತ್ತು ನೀರು ಹರಿಯಿತು; ಅದನ್ನು ನೋಡಿ ಯೋಹಾನನು ಆಶ್ಚರ್ಯಗೊಂಡನು. ನನ್ನ ಆಶೆಯು ಪುನಶ್ಚೇತನಗೊಂಡಿತು''(ಪುಟ71)

## ಪಿಲಾತನು ಶರೀರವನ್ನು ಕೊಂಡು ಹೋಗಲು ಅನುಮತಿಸಿದುದು

ಯೋಸೆಫ ಯಶಸ್ವಿಯಾಗಿ ಪಿಲಾತನೊಡನೆ ವಾದಿಸಿದ ಕುರಿತು ಪತ್ರದಲ್ಲಿ ಈ ರೀತಿ ಬರೆದಿದೆ:

"ಯೋಸೇಫನು ತನ್ನ ಸ್ಥಾನದ ಪ್ರಭಾವದ ಕಾರಣದಿಂದ ಪಿಲಾತನನ್ನು ಒಪ್ಪುವಂತೆ ಮಾಡಿದನು. ಯೇಸು ಕ್ರಿಸ್ತರು ಸತ್ತ ಸಂಗತಿ ತಿಳಿದ ಪಿಲಾತನು ಶರೀರವನ್ನು ಯಾವುದೇ ಹಣ ವಸೂಲು ಮಾಡದೆ ಯೋಸೆಫನಿಗೆ ಕೊಟ್ಟನು. ಪಿಲಾತನು ಯೋಸೆಫನನ್ನು ಆದರಭಾವದಿಂದ ನೋಡುತ್ತಿದ್ದನು ಮತ್ತು ಶಿಲುಬೆಗೆ ಯೇಸು ಕ್ರಿಸ್ತರನ್ನು ಕೊಟ್ಟುದರ ಕುರಿತು ಆತನಿಗೆ ಪಶ್ಚಾತ್ತಾಪವಾಗಿತ್ತು. ಯೇಸುಕ್ರಿಸ್ತರ ಗಾಯವು ರಕ್ತ ಮತ್ತು ನೀರನ್ನು ಹೊರ ಸೂಸುತ್ತಾ ಇದ್ದುದನ್ನು ಕಂಡು ನಿಕೋದೇಮನ ಕಣ್ಣುಗಳು ಹೊಸ ಆಶಾಭಾವದಿಂದ ಉಜ್ವಲವಾದುವು. ಮುಂದೆ ಸಂಭವಿಸುವುದನ್ನು ಮುಂದಾಗಿ ಕಂಡು ಆತನು ಧೈರ್ಯ ಕೊಡುತ್ತಾ ಮಾತಾಡಿದನು. ಆತನು ಯೋಸೆಫನನ್ನು ನನ್ನ ಬಳಿಗೆ ಕರೆತಂದು ಯೋಹಾನನಿಂದ ದೂರವಾಗಿ ನಿಂತು ಮೆಲ್ಲಗೆ ಅವಸರವಸರವಾಗಿ "ಪ್ರಿಯ ಸ್ನೇಹಿತರೇ ಸಂತೋಷಗೊಳ್ಳಿರಿ, ನಾವು ಕೆಲಸ ಮಾಡುವಾ, ಯೇಸು ಸತ್ತಿಲ್ಲ. ಅವರ ಶಕ್ತಿಕುಂದಿದ ಕಾರಣ ಅವರು ಆ ರೀತಿ ಕಾಣುತ್ತಾರೆ'' ಎಂದು ಹೇಳಿ ಅನಂತರ:—

''ಯೋಸೆಫನು ಪಿಲಾತನ ಬಳಿಯಲ್ಲಿದ್ದಾಗ ನಾನು ನಮ್ಮ ವಾಸಸ್ಥಾನಕ್ಕೆ ಹೋಗಿ ಈ ಸಂದರ್ಭಗಳಲ್ಲಿ ಪ್ರಯೋಜನವಾಗುವ ಮೂಲಿಕೆಗಳನ್ನು ತಂದೆನು. ನಾವು ಯೇಸು ಕ್ರಿಸ್ತರ ಶರೀರವನ್ನು ಪುನಶ್ಚೇತನ ಗೊಳಿಸುವೆವೆಂಬ ಸಂಗತಿ ಯೋಹಾನನೊಡನೆ ಹೇಳಬಾರದೆಂದು ನಾನು ಎಚ್ಚರಿಸುತ್ತೇನೆ. ಏಕೆಂದರೆ ಆತನಿಗೆ ತನ್ನ ಅತಿಯಾದ ಸಂತೋಷವನ್ನು ಅಡಗಿಸಲು ಸಾಧ್ಯವಾಗಲಾರದು. ನಮ್ಮ ವಿರೋಧಿಗಳಿಗೆ ಈ ಸಂಗತಿ ಗೊತ್ತಾದರೆ ನಮ್ಮೆಲ್ಲರನ್ನು ಕೊಲ್ಲುವರು'' ಎಂದನು.

## ಯೇಸು ಕ್ರಿಸ್ತರು ಗುಣ ಹೊಂದಿದರು

ಅನಂತರ ಪತ್ರವು ಯೇಸು ಕ್ರಿಸ್ತರನ್ನು ಶುಶ್ರೂಷಿಸಿದ ಸಂಗತಿ ವಿವರಿಸುತ್ತದೆ:

"ಅನಂತರ ಅವರು ಶಿಲುಬೆಯ ಬಳಿಗೆ ಹೋಗಿ ಶಿಲುಬೆಗೆ ಶರೀರವನ್ನು ಬಿಗಿಯಲು ಕಟ್ಟಿದ ಹಗ್ಗಗಳನ್ನು ಬಿಡಿಸಿ ಅವರ ಕೈಗಳಿಗೆ ನಾಟಿದ ಮೊಳೆಗಳನ್ನು ಹೊರ ತೆಗೆದು ಬಹಳ ಜಾಗರೂಕತೆಯಿಂದ ಅವರನ್ನು ನೆಲದ ಮೇಲೆ ಮಲಗಿಸಿದರು'' (ಪುಟ 73). "ಅನಂತರ ನಿಕೋದೇಮನು ಮಸಾಲೆಗಳನ್ನೂ ಮದ್ದುಗಳನ್ನೂ ಉದ್ದವಾದ ಬಟ್ಟೆಯ ಮೇಲೆ ಹರಡಿದನು. ಇದನ್ನು ಯೇಸು ಕ್ರಿಸ್ತರ ಶರೀರದ ಮೇಲೆ ಸುತ್ತಿದನು. ಈ ರೀತಿ ಮಾಡಿದುದು ಹಬ್ಬ ಮುಗಿಯುವ ತನಕ ಶರೀರವು ಕೊಳೆಯದಂತೆ ರಕ್ಷಿಸಿ ಅನಂತರ ಅದನ್ನು ಯೋಗ್ಯ ರೀತಿಯಲ್ಲಿ ಪುನರ್ಲೇಪನ ಗೈಯುವ ಉದ್ದೇಶದಿಂದಯೆಂದು ಇತರರಿಗೆ ತೋರ್ಪಡಿಸಿದನು.

ಈ ಮಸಾಲೆಗಳೂ ಮದ್ದುಗಳೂ ತುಂಬಾ ಗುಣಕಾರಿಯಾಗಿದ್ದು ಮರಣಾಂತಿಕವಾದ ಮೂರ್ಛೆ ಮೊದಲಾದುವುಗಳಿಂದ ರಕ್ಷಿಸಲು ನಮ್ಮ ಭ್ರಾತೃ ಸಂಘದ ವೈದ್ಯಕೀಯ ನಿಯಮಗಳನ್ನರಿತವರಿಂದ ಉಪಯೋಗಿಸಲ್ಪಡುತ್ತಿತ್ತು. ಯೋಸೆಫನೂ ನಿಕೋದೇಮನೂ ಯೇಸುಕ್ರಿಸ್ತರ ಮುಖದ ಮೇಲೆ ಬಾಗಿದಾಗ ಅವರ ಕಣ್ಣೀರು ಮುಖದ ಮೇಲೆ ಬಿದ್ದಿತು. ಅವರು ತಮ್ಮ ಶ್ವಾಸವನ್ನು ಅವರೊಳಗೆ ಊದಿದರು ಮತ್ತು ಅವರ ಕಪೋಲಗಳನ್ನು ಬಿಸಿ ಗೊಳಿಸಿದರು." (ಪುಟ 74)

ಅನಂತರ ಶರೀರವು ಶಿಲಾ ಕುಟೀರದಲ್ಲಿ ಇರಿಸಲ್ಪಟ್ಟಿತು. ಅದು ಯೋಸೇಫನಿಗೆ ಸೇರಿದುದಾಗಿತ್ತು. ಅನಂತರ ಶಿಲಾ ಕುಟೀರದ ಒಳಭಾಗವನ್ನು ವಿವಿಧ ಮೂಲಿಕೆಗಳ ಹೊಗೆಯಿಂದ ತುಂಬಿಸಿ ಶರೀರವು ಅಲುಗಾಡದೆ ಇದ್ದ ಸ್ಥಿತಿಯಲ್ಲಿದ್ದಾಗ, ಶಿಲಾ ಕುಟೀರದ ಬಾಗಿಲನ್ನು ದೊಡ್ಡ ಬಂಡೆಕಲ್ಲಿನಿಂದ ಮುಚ್ಚಿದರು.'' (ಪುಟ 75)

## ಯಹೂದ್ಯರ ಸಂಶಯ

ಯಹೂದ್ಯರ ಹಿರಿಯ ಪುರೋಹಿತನು ಯೇಸು ಕ್ರಿಸ್ತರ ಗುಪ್ತ ಸ್ನೇಹಿತರಾರೆಂದು ತಿಳಿಯಲು ಗುಪ್ತಚಾರರನ್ನು ಕಳುಹಿಸಿದುದಾಗಿ ಪತ್ರದಲ್ಲಿ ಬರೆದಿದೆ. ಶರೀರವನ್ನು ಯಾವುದೇ ಪ್ರತಿಫಲ ಪಡೆಯದೆ ಅರಿಮಥಾಯದ

ಯೋಸೇಫನಿಗೆ ಕೊಟ್ಟುದರ ಕುರಿತು ಪಿಲಾತನನ್ನು ಅವನು ಸಂಶಯಿಸಿದನು. ಯೋಸೇಫನು ಯೇಸುಕ್ರಿಸ್ತರ ವಿಷಯದಲ್ಲಿ ಈ ಮೊದಲು ಯಾವುದೇ ಆಸಕ್ತಿ ತೋರಿಸದೆ ಈಗ ಶವ ಸಂಸ್ಕಾರಕ್ಕೆ ತನ್ನ ಸ್ಥಳವನ್ನು ಕೊಟ್ಟುದರ ಕುರಿತು ಸಹ ಪುರೋಹಿತನು ಸಂಶಯಿಸಿದನು. (ಪುಟ76)

"ಯೇಸು ಕ್ರಿಸ್ತರ ಶರೀರವನ್ನು ಸಂರಕ್ಷಿಸಲು ಲೇಪಿಸುವ ಅಭಿಪ್ರಾಯ ಯೋಸೇಫನಿಗೂ ಸಂಗಡಿಗರಿಗೂ ಇದೆ ಎಂದು ತಿಳಿದು ಯೋಸೇಫನ ಮೇಲೆ ತಪ್ಪು ಆರೋಪಿಸಿ ಜೈಲಿಗೆ ಕಳುಹಿಸಲು ಯಾವುದಾದರೂ ಗುಪ್ತ ಕಾರಣ ದೊರೆಯುವುದೆಂದು ಗ್ರಹಿಸಿ ತನ್ನ ಸಶಸ್ತ್ರ ನೌಕರರನ್ನು ಶವ ಕುಟೀರವಿರುವ ಸ್ಥಳದ ಹತ್ತಿರವಿರುವ ಕಣಿವೆ ಪ್ರದೇಶಕ್ಕೆ ಪ್ರಧಾನ ಪುರೋಹಿತನು ಕಳುಹಿಸಿದನು. (ಪುಟ 75)

"ನಿಕೋದೇಮನೂ ನಾನೂ ನಮ್ಮ ಸಂಘದವರ ಬಳಿಗೆ ಅವಸರವಸರವಾಗಿ ಹೋದೆವು. ನಮ್ಮ ಸಂಘದ ಹಿರಿಯರೂ ಬುದ್ಧಿವಂತರೂ ಯೇಸುಕ್ರಿಸ್ತರನ್ನು ಪುನರುಜ್ಜೀವಿಸುವ ಉತ್ತಮ ಉಪಾಯದ ಕುರಿತು ಚರ್ಚಿಸಿದರು. ನಮ್ಮ ಸಂಘದವರು ಒಬ್ಬ ಕಾವಲುಗಾರರನ್ನು ಕೂಡಲೇ ಶವ ಕುಟೀರಕ್ಕೆ ಕಳುಹಿಸಬೇಕೆಂಬ ವಿಷಯದಲ್ಲಿ ಒಮ್ಮತವನ್ನು ಹೊಂದಿದರು. ಮಧ್ಯ ರಾತ್ರಿಯ ನಂತರ ಬೆಳಗಾಗುತ್ತಿರುವಾಗ ಭೂಮಿಯು ಪುನ: ಅಲುಗಾಡಿತು. ಗಾಳಿಯು ಬಹಳ ಬಿರುಸಾಯಿತು. ಬಂಡೆಗಳು ಅಲುಗಾಡಿ ಸೀಳಿದುವು. ಕೆಂಪಾದ ಜ್ವಾಲೆಗಳು ಬಿರುಕುಗಳೆಡೆಯಿಂದ ಹೊರಸೂಸಿ ಬೆಳಗಿನ ಜಾವದ ಮಂಜನ್ನು ಬೆಳಗಿದುವು. ಅದು ಭಯಂಕರವಾದ ದೃಶ್ಯವಾಗಿತ್ತು. ಪ್ರಾಣಿಗಳು ಭೂಕಂಪದಿಂದ ಹೆದರಿ ಬೊಬ್ಬಿಡುತ್ತಾ ಎಲ್ಲಾ ದಿಕ್ಕುಗಳಿಗೂ ಓಡಿದುವು. ಹಿರಿಯ ಪುರೋಹಿತನ ಸೇವಕರು ಬಿರುಸಾದ ಗಾಳಿಯ ಶಬ್ದವನ್ನೂ ಪ್ರಾಣಿಗಳ ಆಕ್ರಂದನವನ್ನೂ ಕೇಳಿ ಹೆದರಿದರು. (ಪುಟ 77)

"ನಮ್ಮ ಸಂಘದ ಒಬ್ಬ ವ್ಯಕ್ತಿ ಸಮಾಧಿಯನ್ನು ಕಾಯಲು ಬಿಳಿ ಬಟ್ಟೆಯನ್ನು ಧರಿಸಿ ಪರ್ವತದ ಮಧ್ಯದಲ್ಲಿರುವ ನಮಗೆ ಮಾತ್ರ ತಿಳಿದಿದ್ದ ಗುಪ್ತದಾರಿಯ ಮೂಲಕ ಸಮಾಧಿಯ ಬಳಿಗೆ ಹೋದನು. ಪುರೋಹಿತನ ಹೆದರಿದ ಸೇವಕರು ಪರ್ವತವನ್ನು ಇಳಿದು ಬರುತ್ತಿರುವ ಬಿಳಿ ವಸ್ತ್ರಧಾರಿಯನ್ನು ಕಂಡಾಗ ಆತನು ಬೆಳಗಿನ ಜಾವದ ಮಂಜಿನಲ್ಲಿ ಅಸ್ಪಷ್ಟವಾಗಿ ಕಾಣಿಸುತ್ತಾ ಇಳಿಯುತ್ತಿದ್ದಾಗ ಒಬ್ಬ ದೇವತೆ ಪರ್ವತವನ್ನಿಳಿಯುವುದಾಗಿ ಅವರು ಭಾವಿಸಿದರು.

"ನಮ್ಮ ಸಂಘದ ಸದಸ್ಯನು ಸಮಾಧಿಯ ಬಳಿ ಬಂದಾಗ ಸಮಾಧಿಯ ಬಾಗಿಲಿಗಿರಿಸಿದ ಕಲ್ಲನ್ನು ಆಜ್ಞಾಪಿಸಿದ ಪ್ರಕಾರ ತೆಗೆದು ಅದರ ಮೇಲೆ ವಿಶ್ರಮಿಸಿದನು. ಆಗ ಸೈನಿಕರು ಓಡಿ ಹೋಗಿ ತಮ್ಮನ್ನು ಒಬ್ಬ ದೇವತೆ ಓಡಿಸಿದುದಾಗಿ ಸುದ್ದಿ ಹಬ್ಬಿಸಿದರು." (ಪುಟ 78)

**ಸಮಾಧಿಯೊಳಗೆ**

ಯೇಸುಕ್ರಿಸ್ತರ ಶರೀರವಿರಿಸಿದ ಸಮಾಧಿಯೊಳಗೆ ಏನು ನಡೆಯುತ್ತಿತ್ತು ಎಂಬುದನ್ನು ಪತ್ರ ಈ ರೀತಿ ವಿವರಿಸುತ್ತದೆ: "ಯೇಸುಕ್ರಿಸ್ತರು ಮರಣವಾಗಿರುವರೆಂದು ಗ್ರಹಿಸಿ ಮೂವತ್ತು ಗಂಟೆಗಳು ಕಳೆದಿವೆ. ಒಂದು ಚಿಕ್ಕ ಶಬ್ದ ಸಮಾಧಿಯೊಳಗಿಂದ ಕೇಳಿದಾಗ ನಮ್ಮ ಸಂಘ ಸಹೋದರನು ಸಮಾಧಿಯೊಳಗೆ ಹೋದಾಗ ಆತನಿಗೆ ಶರೀರದ ತುಟಿಗಳು ಅಲುಗಾಡುತ್ತಿರುವುದನ್ನು, ಶ್ವಾಸೋಛ್ವಾಸವನ್ನು ಕಂಡು ಅತ್ಯಾನಂದವಾಯಿತು. ಆತನು ಕೂಡಲೇ ಯೇಸುಕ್ರಿಸ್ತರ ಸಹಾಯಕ್ಕೆ ಹೋದನು ಮತ್ತು ಅವರ ಎದೆಯೊಳಗಿಂದ ಮೆಲ್ಲಗೆ ಶಬ್ದಗಳು ಹೊರಡುವುದನ್ನು ಕೇಳಿದನು. ಮುಖವು ಜೀವಂತ ರೂಪವನ್ನು ತೋರುತ್ತಿತ್ತು ಮತ್ತು ಕಣ್ಣುಗಳು, ತೆರೆದು ನಮ್ಮ ಸಂಘದ ಆ ಕಿರುಪ್ರಾಯದ ವ್ಯಕ್ತಿಯನ್ನು ಆಶ್ಚರ್ಯದಿಂದ ನೋಡುತ್ತಿದ್ದುವು.

"ಈ ಸಂಭವ ನಾನು ನಮ್ಮ ಸಂಘದ ಸಭೆಯಿಂದ ನಮ್ಮ ಸಂಘದ ಉನ್ನತ ವ್ಯಕ್ತಿಗಳೊಂದಿಗೆ ಯೋಸೇಫನ ಸಹಿತವಾಗಿ ಹೊರಟಾಗ ನಡೆಯಿತು. (ಪುಟ 79)

"ಸಮಾಧಿಯ ಕಡೆಗೆ ನಡೆಯುತ್ತಾ ಇರುವಾಗ ನಮ್ಮೊಡನಿದ್ದ ನುರಿತ ವೈದ್ಯನಾಗಿದ್ದ ನಿಕೋದೇಮನು ಹವಾಮಾನದಲ್ಲಿ ಉಂಟಾದ ಬದಲಾವಣೆಗಳು ಯೇಸುಕ್ರಿಸ್ತರಿಗೆ ಗುಣಕರವಾಗಿವೆ ಎಂದನು ಅಲ್ಲದೆ ಯೇಸುಕ್ರಿಸ್ತರು ಯಥಾರ್ಥವಾಗಿ ಸತ್ತುದಾಗಿ ತಾನು ನಂಬುವುದಿಲ್ಲವೆಂದೂ ಗಾಯದಿಂದ ಬಂದ ರಕ್ತ ಮತ್ತು ನೀರು ಪ್ರಾಣ ಹೋಗಿಲ್ಲವೆಂಬುದನ್ನು ಸೂಚಿಸುತ್ತದೆಂದೂ ಆತನು ಹೇಳಿದನು. ಈ ರೀತಿ ಮಾತಾಡುತ್ತಾ ನಾವು ಸಮಾಧಿ ತಲುಪಿದೆವು. ಯೋಸೇಫನೂ ನಿಕೋದೇಮನೂ

ನಮ್ಮ ಮುಂದೆ ಇದ್ದರು. ನಾವು ಒಟ್ಟಿಗೆ ಇಪ್ಪತ್ತ ನಾಲ್ಕು ಮಂದಿ ನಮ್ಮ ಸಂಘದ ಪ್ರಥಮ ದರ್ಜೆಯ ಸದಸ್ಯರಿದ್ದೆವು. ಸಮಾಧಿಯನ್ನು ಪ್ರವೇಶಿಸಿದಾಗ ನಮ್ಮ ಸಂಘದ ಆ ಪ್ರಾಥಮಿಕ ಸದಸ್ಯನು ಎಚ್ಚರಗೊಂಡ ಯೇಸುಕ್ರಿಸ್ತರ ತಲೆಯನ್ನು ತನ್ನ ಎದೆಯ ಮೇಲೆ ಒರಗಿಸಿಕೊಂಡು ಕುಳಿತಿರುವುದನ್ನು ನಾವು ಕಂಡೆವು

ಯೇಸು ತನ್ನ ಎಸ್ಸೀನ್ ಸ್ನೇಹಿತರನ್ನು ಗುರುತಿಸಿದಾಗ ಸಂತೋಷದಿಂದ ಅವರ ಕಣ್ಣುಗಳು ಪ್ರಕಾಶಮಾನವಾದುವು. ಅವರ ಕೆನ್ನೆಗಳು ನಸುಗೆಂಪು ವರ್ಣದಿಂದ ಕೂಡಿತ್ತು. ಅವರು ಎದ್ದು ಕುಳಿತು "ನಾನೆಲ್ಲಿರುವೆ?" ಎಂದು ಕೇಳಿದರು. ಯೋಸೆಫನು ಆತನನ್ನು ಆಲಿಂಗಿಸಿದನು ಮತ್ತು ನಡೆದ ಸಂಗತಿಗಳನ್ನು ತಿಳಿಸಿ, ಅವರು ಮರಣ ಹೊಂದಿರುವರೆಂದು ಸೈನಿಕರು ಭಾವಿಸಿದ ಮೂರ್ಛಾವಸ್ಥೆಯಿಂದ ರಕ್ಷಿಸಲ್ಪಟ್ಟದ್ದರ ಕುರಿತು ವಿವರಿಸಿದನು. (ಪುಟ 80)

"ಯೇಸುಕ್ರಿಸ್ತರು ಆಶ್ಚರ್ಯಗೊಂಡರು. ತನ್ನನ್ನೇ ತಾನು ಸ್ಪರ್ಶಿಸಿ ನೋಡಿದರು. ದೇವರನ್ನು ಸ್ತುತಿಸಿ ಯೋಸೆಫನ ಎದೆಯ ಮೇಲೆ ತಲೆ ಇಟ್ಟು ರೋದಿಸಿದರು. ನಿಕೋದೇಮನು ಯೇಸುಕ್ರಿಸ್ತರೊಡನೆ ಸ್ವಲ್ಪ ಆಹಾರ ಸೇವಿಸಲು ಹೇಳಿದನು. ಅವರು ಸ್ವಲ್ಪ ಖರ್ಜೂರವನ್ನೂ ಜೇನಿನಲ್ಲಿ ಮುಳುಗಿಸಿದ ರೊಟ್ಟಿಯನ್ನೂ ತಿಂದರು. ನಿಕೋದೇಮನು ದ್ರಾಕ್ಷಾರಸವನ್ನು ಕುಡಿಯಲು ಕೊಟ್ಟನು. ಅನಂತರ ಯೇಸುಕ್ರಿಸ್ತರು ಆಯಾಸ ಪರಿಹಾರಗೊಂಡವರಾಗಿ ಎದ್ದು ನಿಂತರು. ಅನಂತರ ಅವರಿಗೆ ತನ್ನ ಕೈ ಮತ್ತು ಶರೀರದ ಬದಿಯಲ್ಲುಂಟಾದ ಗಾಯಗಳ ಕುರಿತು ಬೋಧವುಂಟಾಯಿತು. ಆದರೆ ನಿಕೋದೇಮನು ಹರಡಿದ ಮುಲಾಮು ಗುಣಕರವಾಗಿತ್ತು. ಅದು ತನ್ನ ಗುಣಪಡಿಸುವ ಕಾರ್ಯವನ್ನು ಆಗಲೇ ಆರಂಭಿಸಿದ್ದಿತು.

## ಯೇಸು ಕ್ರಿಸ್ತರು ಸಮಾಧಿಯಿಂದ ಹೊರಟು ಹೋದುದು

ಯೇಸು ಕ್ರಿಸ್ತರು ಸಮಾಧಿಯಿಂದ ಪಲಾಯನ ಮಾಡಿದ ಸಂಗತಿಯ ಕುರಿತು ಆ ಪತ್ರವು ಪುನ: ಮುಂದುವರಿಯುತ್ತಿದೆ. ಶರೀರಕ್ಕೆ ಸುತ್ತಿದ ಬಟ್ಟೆಗಳನ್ನು ಮತ್ತು ತಲೆಗೆ ಸುತ್ತಿದ ಬಟ್ಟೆಗಳನ್ನು ಬಿಚ್ಚಿದ ನಂತರ ಯೋಸೆಫನು ಈ ರೀತಿ ಹೇಳಿದನು: "ಇದು ದೀರ್ಘಕಾಲ ನಾವಿರಲು ಯೋಗ್ಯ ಸ್ಥಳವಲ್ಲ, ಇಲ್ಲಿ ವಿರೋಧಿಗಳು ನಮ್ಮ ಗುಟ್ಟನ್ನು ಕಂಡುಹಿಡಿದು ನಮ್ಮನ್ನು ಹಿಡಿದು ಕೊಡುವರು."

"ಆದರೆ ಯೇಸು ನಡೆಯಲು ಶಕ್ತರಾಗಿರಲಿಲ್ಲ. ಆದುದರಿಂದ ನಮ್ಮ ಸಂಘದ ನಿವಾಸಕ್ಕೆ ಅವರನ್ನು ಕರೆದುಕೊಂಡು ಹೋದೆವು. ಅದು ಆ ಸಮಾಧಿಯ ಸಮೀಪವೇ ತೋಟದಲ್ಲಿ ಇದ್ದಿತು." (ಪುಟ 81)

"ನಮ್ಮ ಸಂಘದ ಇನ್ನೋರ್ವ ಸದಸ್ಯನನ್ನು ಯೇಸು ಕ್ರಿಸ್ತರ ಸಮಾಧಿಯನ್ನು ಕಾಯಲು ನಿಂತವನ ಸಹಾಯಕ್ಕೆ ಕಳುಹಿಸಿ ಶರೀರಕ್ಕೆ ಸುತ್ತಿದ ಬಟ್ಟೆಗಳ ಮತ್ತು ಮದ್ದುಗಳ ಕುರುಹುಗಳು ಕಾಣದಂತೆ ಮಾಡಬೇಕೆಂದು ಹೇಳಿದೆವು.

"ಯೇಸುಕ್ರಿಸ್ತರು ನಮ್ಮ ಸಂಘ ಭವನಕ್ಕೆ ಬಂದಾಗ ಅವರು ಬಲಹೀನರಾಗಿದ್ದರು. ಅವರ ಗಾಯಗಳು ವೇದನೆಯನ್ನುಂಟುಮಾಡುತ್ತಿದ್ದುವು. ಅವರಿಗೆ ನಡೆದ ಸಂಭವಗಳನ್ನು ಯೋಚಿಸಿದಾಗ ಅದೊಂದು ಅದ್ಭುತ ದೃಷ್ಟಾಂತದಂತೆ ಕಂಡು ಬಂತು. "ನಾನು ಕಲಿಸಿದುದನ್ನು ಆಧಾರಪೂರ್ವಕವಾಗಿ ತೋರಿಸಿ ಕೊಡಲು ದೇವರು ನನ್ನನ್ನು ಪುನರುಜ್ಜೀವನಗೊಳಿಸಿರುವನು ನನ್ನ ಶಿಷ್ಯರಿಗೆ ನಾನು ಜೀವಿಸಿರುವ ಸಂಗತಿ ತೋರಿಸುವೆನು" (ಪುಟ 82) ಎಂದು ಯೇಸು ಕ್ರಿಸ್ತರು ಹೇಳಿದರು.

## ಯೇಸು ಕ್ರಿಸ್ತರು ಶಿಷ್ಯರನ್ನು ಭೇಟಿಯಾದರು

ಎಸ್ಸೀನ್ ಸಹೋದರರು ಯೇಸುಕ್ರಿಸ್ತರ ರಕ್ಷಣೆಗೆ ಎಲ್ಲಾ ವಿಧದ ಏರ್ಪಾಡು ಕೈಗೊಂಡು ಅವರ ಶಿಷ್ಯರನ್ನು ಅವರು ಗುಪ್ತವಾಗಿ ಮೆಸ್ಸೆದಾದಲ್ಲಿಯೂ, ಬೆಥಾನಿಯದಲ್ಲಿ ಲಾಜರಸನ ಮನೆಯಲ್ಲಿಯೂ ಗೆಲಿಲಾಯದಲ್ಲಿಯೂ, ಕಾರ್ಮೆಲ್ ಪರ್ವತದಲ್ಲಿಯೂ ಕಂಡು ಅವರಿಗೆ ಅವರ ವಿಶ್ವಾಸ ಮತ್ತು ಕಾರ್ಯಗಳಲ್ಲಿ ದೃಢತೆ ಉಂಟಾಗಲು ಭಾಷಣ ಮಾಡುವಂತೆ ಏರ್ಪಡಿಸಿದರೆಂದೂ ಅವರ ಭಾಷಣಗಳೂ, ಮಾತುಗಳೂ ಅವರು ಜೀವಂತವಿರುವರೆಂಬ ಸುದ್ದಿಯೂ ಜನರೆಡೆಯಲ್ಲಿ ಬಹಳ ಕೌತುಕವನ್ನುಂಟುಮಾಡಿತೆಂದೂ ಪತ್ರವು ತಿಳಿಸುತ್ತದೆ.

## ಯಹೂದ್ಯರು ಜಾಗೃತರಾದರು

ಯೇಸುಕ್ರಿಸ್ತರು ಶಿಲುಬೆಯಿಂದ ರಕ್ಷಿಸಲ್ಪಟ್ಟಿರುವರೆಂಬ ಯಹೂದ್ಯರ ಸಂಶಯವು ದೃಢೀಕರಿಸಲ್ಪಟ್ಟಿ

ತೆಂದೂ ಅವರು ಯೇಸುಕ್ರಿಸ್ತರನ್ನು ನಾಶಪಡಿಸಲು ಹೊಸದಾದ ಕಾರ್ಯಕ್ರಮಗಳನ್ನು ರೂಪಿಸಿದರೆಂದೂ ಆ ಪತ್ರದಿಂದ ವ್ಯಕ್ತವಾಗುತ್ತಿದೆ. ಪತ್ರವು ಈ ವಿಷಯದ ಕುರಿತು ಈ ರೀತಿ ಹೇಳುತ್ತದೆ: "ನಿಕೋದೇಮನು ಒಂದು ದಿವಸ ನಮ್ಮ ಸಂಘಕ್ಕೆ ಬಂದು ಅರಿಮಥಾಯದ ಯೋಸೆಫನನ್ನು ಬಂಧಿಸಲಾಗಿದೆಯೆಂದೂ ಆತನು ನ್ಯಾಯಬಾಹಿರವಾದ ಉದ್ದೇಶಗಳನ್ನು ಹೊಂದಿದ್ದನೆಂದೂ ಯೇಸುಕ್ರಿಸ್ತರೊಂದಿಗೆ ರಹಸ್ಯ ಸಂಬಂಧವಿರಿಸಿದ್ದನೆಂದೂ ಆತನ ಮೇಲೆ ಆರೋಪ ಹೊರಿಸಲಾಗಿದೆಯೆಂದೂ ಹೇಳಿದನು.'' (ಪುಟ 110)

ಅನಂತರ ಯೋಸೆಫನನ್ನು ಬಂಧನದಿಂದ ಎಸ್ಸೀನ್ ಭ್ರಾತೃ ಸಂಘದ ಪ್ರಯತ್ನದಿಂದ ಬಿಡಿಸಲಾಯಿತು.

"ಯೇಸುಕ್ರಿಸ್ತರು ಕಾರ್ಮೆಲ್ ಪರ್ವತದ ಕಣಿವೆಯಲ್ಲಿದ್ದಾಗ ಎಸ್ಸೀನ್ ಭ್ರಾತೃ ಸಂಘದವರು ಯೇಸುಕ್ರಿಸ್ತರನ್ನು ಅವರಿರುವ ಅಪಾಯಕಾರಿ ಸ್ಥಿತಿಯ ಕುರಿತು ಎಚ್ಚರಿಸಿ ಅವರು ವಿರೋಧಿಗಳಿಂದ ರಕ್ಷಿಸಲ್ಪಟ್ಟು ತನ್ನ ನಿಶ್ಚಿತ ಕಾರ್ಯವನ್ನು ಪೂರ್ಣಗೊಳಿಸುವಂತೆ ಸಹಾಯ ಮಾಡಿದರು. ಯಹೂದ್ಯರ ಹಿರಿಯ ಪುರೋಹಿತನು ಯೇಸ ಕ್ರಿಸ್ತರನ್ನು ಮೋಸಗಾರನೆಂದು ನಂಬಿದ್ದು ಅವರನ್ನು ಹಿಡಿದು ಕೊಲ್ಲುವ ಏರ್ಪಾಡು ಮಾಡಿದುದು ಭ್ರಾತೃ ಸಂಘದವರಿಗೆ ತಿಳಿದಿದ್ದಿತು. (ಪುಟ 118)

ಯೋಸೆಫನು ಯೇಸು ಕ್ರಿಸ್ತರಿಗೆ ಹೇಳಿದನು:— "ನಿಮ್ಮ ತತ್ವಗಳನ್ನು ಸ್ವಲ್ಪವೂ ತಿಳಿಯದವರು ನಿಮ್ಮನ್ನು ರಾಜನೆಂದು ಘೋಷಿಸಿ ರೋಮನ್ ಜನರನ್ನು ಪರಾಜಯ ಗೊಳಿಸಲು ಆಲೋಚಿಸುವುದು ನಿಮಗೆ ತಿಳಿದಿದೆಯೋ ? ಆದರೆ ನೀವು ದೇವರ ಸಾಮ್ರಾಜ್ಯವನ್ನು ಯುದ್ಧ ಮತ್ತು ಕ್ರಾಂತಿಯಿಂದ ತೊಂದರೆ ಪಡಿಸಬೇಡಿರಿ. ಆದುದರಿಂದ ನೀವು ಏಕಾಂತವಾಸವನ್ನು ಕೈಗೊಂಡು ಎಸ್ಸೀನ್ ಭ್ರಾತೃ ಸಂಘದವರ ಸಹಾಯದಿಂದ ಸುರಕ್ಷಿತರಾಗಿರುವಂತೆಯೂ ನಿಮ್ಮ ಶಿಷ್ಯರು ನಿಮ್ಮ ತತ್ವಗಳನ್ನು ಪ್ರಚಾರ ಗೊಳಿಸುವಂತೆಯೂ ಮಾಡಿರಿ.'' (ಪುಟ 120)

"ಯೇಸುಕ್ರಿಸ್ತರು ಏಕಾಂತವಾಸ ಕೈಗೊಳ್ಳಲು ಸಮ್ಮತಿಸಿದರು." (ಪುಟ 121)

### ಯೇಸುಕ್ರಿಸ್ತರು ರಾಜ್ಯ ತೊರೆದರು

ಪತ್ರವು ಯೇಸುಕ್ರಿಸ್ತರು ತನ್ನ ಶಿಷ್ಯರನ್ನು ಕೊನೆಯಬಾರಿ ಭೇಟಿಯಾದ ಸಂಗತಿ ವಿವರಿಸುತ್ತದೆ. "ಅವರು ತನ್ನ ಶಿಷ್ಯರನ್ನು ತನಗೆ ಅತ್ಯಂತ ಪ್ರಿಯವಾದ ಸ್ಥಳಕ್ಕೆ ಕರಕೊಂಡು ಹೋದರು. ಅದು ಓಲಿವ್ ಪರ್ವತದ ತುದಿಯ ಬಳಿಯಾಗಿತ್ತು. ಅಲ್ಲಿಂದ ಪಾಲೆಸ್ತೀನ್ ದೇಶವು ಸಾಧಾರಣ ಸಂಪೂರ್ಣವಾಗಿ ಕಾಣುತ್ತಿತ್ತು. "ತಾನು ನಿವಾಸಿಸಿದ ರಾಜ್ಯವನ್ನು ಇನ್ನೊಮ್ಮೆ ನೋಡಲು ಯೇಸುಕ್ರಿಸ್ತರಿಗೆತುಂಬಾ ಆಶೆಯಾಗಿತ್ತು.'' (ಪುಟ 123)

"ಯೇಸುಕ್ರಿಸ್ತರು ತಮ್ಮನ್ನು ಬೆಥಾನಿಯಕ್ಕೆ ಕರೆದುಕೊಂಡು ಹೋಗುವರೆಂದು ಶಿಷ್ಯರು ನಂಬಿದ್ದರು. ಆದರೆ ಭ್ರಾತೃ ಸಂಘದ ಹಿರಿಯರು ಮೊದಲೇ ನಿಶ್ಚಯಿಸಿದ ಪ್ರಕಾರ ಪರ್ವತದ ಇನ್ನೊಂದು ಬದಿಯಲ್ಲಿ ಯೇಸುಕ್ರಿಸ್ತರೊಡನೆ ಪ್ರಯಾಣಿಸಲು ಕಾದಿದ್ದರು.''

"ಯೇಸುಕ್ರಿಸ್ತರು ಶಿಷ್ಯರೊಡನೆ ಸಂತೋಷದಲ್ಲಿ ಇರುವಂತೆಯೂ ದೃಢ ವಿಶ್ವಾಸ ಹೊಂದುವಂತೆಯೂ ಉಪದೇಶಿಸಿದರು. ತಾನು ತೊರೆದು ಹೋಗಲಿರುವ ಸ್ನೇಹಿತರಿಗಾಗಿ ಅವರು ಪ್ರಾರ್ಥಿಸಿ ತನ್ನ ಕೈಯೆತ್ತಿ ಅವರನ್ನು ಆಶೀರ್ವದಿಸಿದರು. ಆಗ ಪರ್ವತದ ಸುತ್ತಲೂ ಮಂಜು ಹಬ್ಬಿತ್ತು. ಅದು ಅಸ್ತಂಗತನಾಗುತ್ತಿದ್ದ ಸೂರ್ಯನ ಬೆಳಕಿನಲ್ಲಿ ವರ್ಣಮಯವಾಗಿತ್ತು.

"ಆಗ ಎಸ್ಸೀನ್ ಭ್ರಾತೃ ಸಂಘದ ಹಿರಿಯರು ತಾವು ಕಾಯುತ್ತಿರುವುದನ್ನೂ ಸಮಯ ಮಿತಿಮೀರಿ ಹೋದುದನ್ನೂ ತಿಳಿಸಿ ಯೇಸುಕ್ರಿಸ್ತರನ್ನು ಎಚ್ಚರಿಸಿದರು. ಶಿಷ್ಯರು ಮೊಣಕಾಲೂರಿದ್ದರು; ಅವರ ದೃಷ್ಟಿ ನೆಲದ ಕಡೆಗೆ ಬಾಗಿದ್ದಿತು. ಯೇಸುಕ್ರಿಸ್ತರು ಎದ್ದು ಅವಸರ ಪಸರವಾಗಿ ನಿಬಿಡವಾಗುತ್ತಿದ್ದ ಮಂಜಿನ ಮಧ್ಯದಲ್ಲಿ ಹೋದರು. ಶಿಷ್ಯರು ಪ್ರಾರ್ಥನೆಯಿಂದ ಎದ್ದಾಗ ಇಬ್ಬರು ನಮ್ಮ ಸಂಘದ ಸದಸ್ಯರು ಬಿಳಿಯುಡುಗೆಯಲ್ಲಿ ನಿಂತಿದ್ದರು. ಯೇಸುಕ್ರಿಸ್ತರು ಹೋಗಿರುವರೆಂದೂ ಅವರನ್ನು ಕಾಯುವುದು ಬೇಡವೆಂದೂ ಅವರು ಶಿಷ್ಯರಿಗೆ ತಿಳಿಸಿದಾಗ ಶಿಷ್ಯರು ತ್ವರಿತಗತಿಯಿಂದ ಪರ್ವತವನ್ನು ಇಳಿದು ಹೋದರು.'' (ಪುಟ 124)

"ಯೇಸುಕ್ರಿಸ್ತರು ಅದೃಶ್ಯರಾದುದು ಶಿಷ್ಯರನ್ನು ಹೊಸ ಆಶಾಭಾವ ಮತ್ತು ಧೈರ್ಯದಿಂದ ತುಂಬಿಸಿತು. ಯೇಸುಕ್ರಿಸ್ತರ ಸಂದೇಶವನ್ನು ತಾವೇ ಘೋಷಿಸಬೇಕೆಂಗೂ ತಮಗೆ ಪ್ರಿಯವಾದ ಯೇಸುಕ್ರಿಸ್ತರು ಪುನ: ಬರಲಾರರೆಂದೂ ಅವರು ನಂಬಿದ್ದರು. ಆದರೆ ಪಟ್ಟಣದಲ್ಲಿ ಯೇಸುಕ್ರಿಸ್ತರು ಮೋಡವೊಂದರ ಮೂಲಕ

ಆಕಾಶಕ್ಕೆ ಎತ್ತಲ್ಪಟ್ಟರೆಂದೂ ಅವರು ಸ್ವರ್ಗವನ್ನೇರಿದ ರೆಂದೂ ವದಂತಿಗಳು ಹಬ್ಬಿದುವು. ಯೇಸು ಕ್ರಿಸ್ತರು ಅದೃಶ್ಯರಾದಾಗ ಅಲ್ಲಿ ಹಾಜರಿಲ್ಲದವರಿಂದ ವದಂತಿಗಳು ಹಬ್ಬಿಸಲ್ಪಟ್ಟುವು. ಶಿಷ್ಯರು ಇದನ್ನು ನಿಷೇಧಿಸಲಿಲ್ಲ. ಏಕೆಂದರೆ ಈ ಸುದ್ದಿ ಅವರ ತತ್ವಗಳನ್ನು ಬಲಪಡಿಸಿ ಯೇಸು ಕ್ರಿಸ್ತರನ್ನು ನಂಬಲು ಒಂದು ದೃಷ್ಟಾಂತವನ್ನು ಅಪೇಕ್ಷಿಸುವವರನ್ನು ಪ್ರೇರೇಪಿಸುವಂತಿತ್ತು. (ಪುಟ 125)

## ಲೋಕದವರೆದುರಲ್ಲಿ ಮೃತ

ಪತ್ರದ ಕೊನೆಯ ಭಾಗವು ಯಹೂದ್ಯರ ಸಂಶಯಂಗಳು ಕೊನೆಗೊಳ್ಳುವಂತೆಯೂ ಯೇಸು ಕ್ರಿಸ್ತರು ಸಂಗಮವಾಗಿ ರಾಜ್ಯ ಬಿಟ್ಟು ಪರದೇಶಕ್ಕೆ ಹೋಗಲು ಸಹಾಯಮಾಡುವಂತೆಯೂ ವಿರಚಿಸಿದ ಒಂದು ಗುಪ್ತ ಏರ್ಪಾಡನ್ನು ಸೂಚಿಸುತ್ತದೆ.

ಯೇಸು ಕ್ರಿಸ್ತರ ಅಜ್ಞಾತ ನಿವಾಸ ಸ್ಥಾನಕ್ಕೆ ಯೋಸೆಫನೂ ನಿಕೋದೇಮನೂ ಮೂರು ಸಾರಿ ಭೇಟಿ ಕೊಟ್ಟುದಾಗಿ ಪತ್ರವು ವಿವರಿಸುತ್ತದೆ. ಕೊನೆಯ ಬಾರಿ "ಪೂರ್ಣಿಮ ಕಳೆದು ಆರು ದಿವಸವಾದಾಗ ಅವರಿಬ್ಬರು ನಮ್ಮ ಸಂಘಕ್ಕೆ ಬಂದು ಬಹಳ ದುಃಖಿತರಾಗಿ ಯೇಸು ಕ್ರಿಸ್ತರ ಮರಣ ವಾರ್ತೆ ತಿಳಿಸಿದರು. ಅವರನ್ನು ನಿಕೋದೇಮನು ಸತ್ತಸಮುದ್ರ (Dead Sea)ದ ಸಮೀಪ ಸಮಾಧಿಗೊಳಿಸುವನೆಂದು ತಿಳಿಸಿದರು." (ಪುಟ 128)

ಯೇಸು ಕ್ರಿಸ್ತರು, ತನ್ನನ್ನು ದೇವರು ಕಾಪಾಡಿದ ಸಂಗತಿ ತಿಳಿಸಲು ಜನರೆಡೆಗೆ ಹೋಗಲು ನಿಶ್ಚಯಿಸಿದಾಗ ಎಸ್ಸೀನ್ ಭ್ರಾತೃ ಸಂಘದವರು ಈ ಕೆಳಗಿನಂತೆ ಹೇಳಿದುದಾಗಿ ಪತ್ರದಲ್ಲಿ ಬರೆದಿದೆ:

"ನೀವು ಈ ರಾಜ್ಯದಲ್ಲಿ ಸುರಕ್ಷಿತರಲ್ಲ. ಏಕೆಂದರೆ ಅವರು ನಿನ್ನನ್ನು ಹುಡುಕುತ್ತಿರುವರು. ಆದುದರಿಂದ ನೀವು ಜನರ ಮಧ್ಯದಲ್ಲಿ ಉಪದೇಶಿಸಲು ತೆರಳಬೇಡಿರಿ. ನೀವು ಕಲಿಸಿದುದು ನಿಮ್ಮ ಸ್ನೇಹಿತರು ಮರೆಯಲಾರರು ಮತ್ತು ನಿಮ್ಮ ಶಿಷ್ಯರು ಲೋಕಕ್ಕೆ ಅದನ್ನು ಪ್ರಕಟಗೊಳಿಸುವರು. ನಾವು ನಿಮ್ಮನ್ನು ಪ್ರಾರ್ಥಿಸುತ್ತೇವೆ: "ನೀವು ಲೋಕಕ್ಕೆ ಸತ್ತಂತೆಯಾಗಿ ಬುದ್ಧಿ ಮತ್ತು ಸದ್ಗುಣಗಳಿಂದ ಏಕಾಂತವಾಗಿ ಜೀವಿಸಿರಿ." (ಪುಟ 92)

ಮೇಲಿನ ಉಪಾಯವು ಸರಿಯೆಂದು ಅನಂತರದ ಸಂಭವಗಳು ಸ್ಪಷ್ಟಗೊಳಿಸಿದುವು. ಈ ರೀತಿ ಯೇಸು ಕ್ರಿಸ್ತರು "ಲೋಕಕ್ಕೆ ಸತ್ತಂತೆ" ಆಗುವಂತೆ ನಿಶ್ಚಯಿಸಲ್ಪಟ್ಟಿತು.

ಪತ್ರದಲ್ಲಿ ಬರೆದುದನ್ನು ನೋಡಿದರೆ ಅದರ ಲೇಖಕನು ಯೇಸು ಕ್ರಿಸ್ತರು ಮರಣವಾದುದು ನೋಡಲಿಲ್ಲವೆಂದೂ ಅದು ಕೇವಲ ಕೇಳಿದ ವಾರ್ತೆ ಎಂದೂ ಯೇಸು ಕ್ರಿಸ್ತರು "ಲೋಕಕ್ಕೆ ಸತ್ತಂತೆ"ಯಾಗುವಂತೆ ಮಾಡಲು ಮತ್ತು ಅವರನ್ನು ವಿರೋಧಿಗಳು ಹುಡುಕದಿರುವಂತೆ ಮಾಡಲು ಯೋಸೆಫನೂ ನಿಕೋದೇಮನೂ ಈ ಏರ್ಪಾಡನ್ನು ಮಾಡಿದರೆಂದು ತಿಳಿಯುತ್ತದೆ. ಯೇಸು ಕ್ರಿಸ್ತರ ಮರಣ ಮತ್ತು ಹೂಳುವಿಕೆಯ ಸಂಗತಿ ಸರಿಯಾಗಿದ್ದರೆ ಈ ಕಳೆದ ಶತಮಾನಗಳಲ್ಲಿ ಈ ಸಮಾಧಿಯ ಕುರಿತು ಯಾವುದಾದರೂ ಕುರುಹುಗಳು ಸತ್ತಸಮುದ್ರದ ಸಮೀಪ ದೊರೆಯುತ್ತಿದ್ದುವು. ಇದು ಏನೇ ಇರಲಿ ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತವಾಗಿಲ್ಲವೆಂಬುದು ಸ್ಫಟಿಕದಂತೆ ಸ್ಪಷ್ಟವಾಗಿದೆ.

## ಜರ್ಮನ್ ಭಾಷಾಂತರಕಾರನ ಟೀಕೆ

ಜರ್ಮನ್ ಭಾಷಾಂತರಕಾರನು ತನ್ನ ಅಭಿಪ್ರಾಯಗಳನ್ನು ಸೂಚಿಸುತ್ತಾ ಈ ರೀತಿ ಬರೆದಿರುವನು:

"ಈ ಪತ್ರ ಹಲವಾರು ಕುತೂಹಲದಾಯಕ ಸಂಭವಗಳನ್ನು ಸುವಾರ್ತೆಗಳ ವಿವರಣೆಗಳಿಗೆ ಸರಿದೂಗುವಂತೆ ಯಾವುದೇ ದುರುದ್ದೇಶವಿಲ್ಲದೆ ಭಕ್ತಿಯಿಂದ ಸುಲಭವಾಗಿ ಅರ್ಥವಾಗುವಂತೆ, ಯಾವುದೇ ಉದ್ರೇಕಕ್ಕೆ ಎಡೆ ಕೊಡದಂತೆ ವಿವರಿಸುತ್ತದೆ. (ಪುಟ 133)

"ಯೇಸು ಕ್ರಿಸ್ತರು ಶಿಲುಬೆಯಲ್ಲಿ ಅನುಭವಿಸಿದ ಯಾತನೆಗಳ ವಿವರಣೆ ಪ್ರಧಾನವಾಗಿದ್ದು ಅದನ್ನು ಬಹಳ ಸೂಕ್ಷ್ಮವಾಗಿ ವಿವರಿಸಲಾಗಿದೆ. ಸುವಾರ್ತೆಗಳು ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದಿದರೆಂದು ಘೋಷಿಸಿ ಅವರು ಪುನರುಜ್ಜೀವನ ಹೊಂದಿದುದು ಒಂದು ಪವಾಡವೆಂದು ಸೂಚಿಸುತ್ತವೆ. ಇದು ಒಂದು ಕಥೆಯೆಂದು ಗ್ರಹಿಸಿ ಬುದ್ಧಿವಂತನಾದ ಮನುಷ್ಯನು ಇದರಿಂದ ಬೇರೊಂದು ಅರ್ಥವನ್ನು ಊಹಿಸುತ್ತಾನೆ. ಆದರೆ ಈ ಪತ್ರದಲ್ಲಿ ವಿವರಿಸಲಾದ ಸಂಭವಗಳು ಬಹಳ ಲಲಿತವಾಗಿ ವಿವರಿಸಲ್ಪಟ್ಟಿವೆ ಮತ್ತು ಸಂಭಾವ್ಯ ಸಂಗತಿಗಳಿಂದ ಕೂಡಿವೆ ಮತ್ತು ಸಂದರ್ಭಗಳು ಸಹ ಒಂದಕ್ಕೊಂದು ಸರಿ ಹೋಲುತ್ತವೆ; ಅವುಗಳನ್ನು ನಂಬುವುದು ಅತ್ಯಾವಶ್ಯಕವಾಗುತ್ತದೆ. (ಪುಟ 140)

"ಈ ಪುರಾತನ ಪತ್ರದಲ್ಲಿ ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದಿಲ್ಲವೆಂದೂ ಅವರು ಮೂರ್ಛಿತರಾದರೆಂದೂ ಬರೆಯಲಾಗಿದೆ. ಯೇಸುಕ್ರಿಸ್ತರು ಶಿಲುಬೆಯಲ್ಲಿ ಮರಣವಾದರೆಂದು ಸುವಾರ್ತೆಗಳಲ್ಲಿ ಬರೆದುದನ್ನು ನೋಡಿದರೆ ಯೇಸುಕ್ರಿಸ್ತರು ತೋರಿಕೆಗೆ ಮಾತ್ರ ಮರಣ ಹೊಂದಿದಂತೆ ಕಂಡರೆಂದು ಭಾಸವಾಗುತ್ತದೆ. ಮೊದಲು ಅವರು ಎಷ್ಟು ಬೇಗ ಮೂರ್ಛಿತರಾದರೆಂದರೆ ಪಿಲಾತನಿಗೆ ಸಹ ಆತನ ಮರಣದ ಕುರಿತು ಸಂಶಯವಾಯಿತು. ಆಗ ಜ್ಯಾರಿಯಲ್ಲಿದ್ದ ಶಿಲುಬೆಗೆ ಕೊಡಲ್ಪಡುವ ಕ್ರಮದಿಂದ ಆ ಕಾಲದಲ್ಲಿ ಶಿಲುಬೆಗೆ ಕೊಡಲ್ಪಟ್ಟವರು ಪುನಃ ಬದುಕುವುದು ಸಹ ಸಾಧ್ಯವಿತ್ತು. (ಪುಟ 141)

ಆಗಿನ ಕಾಲದ ಚರಿತ್ರೆಗಾರರು, ಆ ಕಾಲದಲ್ಲಿ ಶಿಲುಬೆಗೆ ಕೊಡಲ್ಪಟ್ಟ ಅಪರಾಧಿಗಳು ಶಿಲುಬೆಯಿಂದ ಇಳಿಸಲ್ಪಟ್ಟು ಬದುಕಿಸಲ್ಪಟ್ಟ ಸಂಗತಿಗಳನ್ನು ವಿವರಿಸಿರುವರು. ಶಿಲುಬೆಗೆ ಕೊಡಲ್ಪಟ್ಟವರನ್ನು ರಾತ್ರೆಯ ಸಮಯ ಇಳಿಸುವ ಯಹೂದ್ಯ ಆಚಾರವನ್ನು ಅನುಸರಿಸದ ಜನಾಂಗಗಳಲ್ಲಿ ಶಿಲುಬೆಗೆ ಕೊಡಲ್ಪಟ್ಟ ಅಪರಾಧಿಗಳು ಎಂಟೋ ಒಂಭತ್ತೋ ದಿವಸಗಳಷ್ಟು ಸಮಯ ಶಿಲುಬೆಯಲ್ಲಿ ಭಯಂಕರ ಕಷ್ಟಗಳನ್ನು ಅನುಭವಿಸಿದ ನಂತರ ಸಾಯುತ್ತಿದ್ದರು. ಯೇಸು ಕ್ರಿಸ್ತರನ್ನು ಶಿಲುಬೆಗೆ ಕೊಟ್ಟ ರೀತಿಯನ್ನು ಪರೀಕ್ಷಿಸಿದರೆ, ಅವರ ಜೀವ ಹೆಚ್ಚು ಕಾಲ ಬಾಕಿ ಇರುವುದು ಅಸಂಭಾವ್ಯವಲ್ಲ. (ಪುಟ 142)

---

ಅಧ್ಯಾಯ 5

## — ಇತ್ತೀಚೆಗೆ ದೊರೆತ ಚಾರಿತ್ರಿಕ ಸಾಕ್ಷ್ಯ —

**ಯೇಸು ಕ್ರಿಸ್ತರ ಶವ ವಸ್ತ್ರ – ಜರ್ಮನಿಯ ಶಾಸ್ತ್ರಜ್ಞರು ಅತ್ಯಾಶ್ಚರ್ಯಕರವಾದ ಸಂಗತಿಯೊಂದನ್ನು ಕಂಡುಹಿಡಿದರು.**

ಯೇಸು ಕ್ರಿಸ್ತರ ಶವರೂಪೀ ಶರೀರವನ್ನು ಹೊದಿಸಿದ ಬಟ್ಟೆ ಅವರ ಪಲಾಯನದ ನಂತರ ಶವ ಕುಟೀರದಲ್ಲಿ ಸಿಕ್ಕಿತು. (ಯೋಹಾನ 20:5). ಈ ಬಟ್ಟೆ ಈಗಲೂ ಇದೆ. ಯೇಸು ಕ್ರಿಸ್ತರ ಶರೀರವನ್ನು ಲೇಪಿಸಿದ ಮುಲಾಮು ಶರೀರದ ಗುರುತನ್ನು ಈ ಬಟ್ಟೆಯಲ್ಲಿ ಉಂಟುಮಾಡಿದೆ.

ಇತ್ತೀಚೆಗೆ ಕೆಲವು ಜರ್ಮನ್ ಶಾಸ್ತ್ರಜ್ಞರು ಕೆಲವು ಮುಖ್ಯ ಪ್ರಕಟಣೆಗಳನ್ನು ಇದರ ಕುರಿತು ಮಾಡಿರುವರು. ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದಿರಲಿಲ್ಲವೆಂದು ಅವರು ತೋರಿಸಿರುವರು. ಯೇಸು ಕ್ರಿಸ್ತರನ್ನು ಪರಮಾವಧಿಯ ಮೂರ್ಛಾವಸ್ಥೆಯಲ್ಲಿ ಅಥವಾ ಪೂರ್ಣವಾದ ಬೋಧರಾಹಿತ್ಯಾವಸ್ಥೆಯಲ್ಲಿ ಶಿಲುಬೆಯಿಂದ ಇಳಿಸಲಾಗಿತ್ತು. ಮಗ್ದಲದ ಮರಿಯಳು ಶವ ಕುಟೀರಕ್ಕೆ ಹೋಗುವ ಮೊದಲೇ ಅವರು ಎಚ್ಚೆತ್ತು ತೋಟಗಾರನ ಉಡುಗೆಯನ್ನು ತೊಟ್ಟು ಪುನಃ ಬಂಧಿತನಾಗುವುದರಿಂದ ತಪ್ಪಿಸಲು ಪ್ರಯತ್ನ ಕೈಗೊಂಡಿದ್ದರು. ಆದುದರಿಂದ ಭೂಮಿಯಲ್ಲಿ ಅವರು ಕಾಣಿಸಿಕೊಂಡುದು ಪುನರುತ್ಥಾನವಾಗಿರಲಿಲ್ಲ; ಅದು ಮೂರ್ಛೆಯಿಂದ ಎಚ್ಚರಗೊಳ್ಳುವಿಕೆ ಮಾತ್ರವಾಗಿದ್ದಿತು.

ಸ್ಕೆಂಡಿನೇವಿಯಾದ ಪತ್ರಿಕೆಯಾದ ಸ್ಟೋಕ್ ಹೋಮ್ ಟೈಡಿನಿನ್‌ಜೆನ್ (Stockholm Tidiningen)ನ ಸಂಪಾದಕ 2ನೇ ಎಪ್ರಿಲ್ 1957ರ ಸಂಚಿಕೆಯಲ್ಲಿ ಬರೆದ ಲೇಖನವನ್ನು ಉರ್ದುವಿಗೆ ಭಾಷಾಂತರಿಸಿ ಸದರ್ ಅಂಜುಮನ್ ಅಹ್ಮದಿಯಾ ರಬ್ವಾ (ಪಾಕಿಸ್ಥಾನ) "ಹಝರತ್ ಮಸೀಹ್ ನಾಸಿರೀ ಸಲೀಬ್ ಪರ್ ಹರ್ಗಿಝ್ ಫೌತ್ ನಹೀಂ ಹುವೇ" (ಯೇಸುಕ್ರಿಸ್ತರು ಶಿಲುಬೆಯಲ್ಲಿ ಖಂಡಿತವಾಗಿಯೂ ಮರಣ ಹೊಂದಿಲ್ಲ) ಎಂಬ ಶಿರೋನಾಮೆಯಲ್ಲಿ ಪ್ರಸಿದ್ಧಗೊಳಿಸಿದರು. ಆ ಲೇಖನವನ್ನು ಈ ರೀತಿ ಭಾಷಾಂತರಗೊಳಿಸಬಹುದು:

### ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾದರೇ?

"ಜರ್ಮನ್ ವಿಜ್ಞಾನಿಗಳ ಒಂದು ಗುಂಪು ಯೇಸು ಕ್ರಿಸ್ತರ ಶವ ವಸ್ತ್ರದ ಕುರಿತು ಕಳೆದ ಎಂಟು ವರ್ಷಗಳಿಂದ ಸಂಶೋಧನೆ ನಡೆಸುತ್ತಿತ್ತು. ಅವರ ಸಂಶೋಧನೆಯಿಂದ ದೊರೆತ ಫಲಿತಾಂಶವನ್ನು ಇತ್ತೀಚೆಗೆ ಪತ್ರಿಕೆಗಳ ಶ್ರದ್ಧೆಗೆ ತರಲಾಯಿತು. ಯೇಸು ಕ್ರಿಸ್ತರ ದೇಹಕ್ಕೆ ಸುತ್ತಲ್ಪಟ್ಟ ಎರಡು ಸಾವಿರ ವರ್ಷಗಳಷ್ಟು ಹಳೆಯದಾದ ಈ ಬಟ್ಟೆಯು ಇಟೆಲಿಯ ಟ್ಯೂರಿನ್ ಪಟ್ಟಣದಲ್ಲಿ ಇದೆ. ಅದರಲ್ಲಿ ಕ್ರಿಸ್ತರ ಶರೀರದ ಗುರುತು ಒತ್ತಲ್ಪಟ್ಟಿದೆ.

"ವಿಜ್ಞಾನಿಗಳು ಪೋಪರಿಗೆ ಈ ಸಂಶೋಧನೆಯ ಕುರಿತು ತಿಳಿಸಿರುವರು. ಆದರೆ ಇದರ ಕುರಿತು ಪೋಪರು ಏನೂ ಹೇಳಿಲ್ಲ. ಈ ಸಂಶೋಧನೆಯು ಕೆಥೋಲಿಕ್ ಚರ್ಚಿನ ಧಾರ್ಮಿಕ ಚರಿತ್ರೆಯ ಒಂದು ಪ್ರಧಾನ ರಹಸ್ಯವನ್ನು ಹೊರಗೆಡಗುತ್ತದೆ. ಎರಡು ಸಾವಿರ ವರ್ಷಗಳಿಂದ ಒಂದು ಪವಾಡ ಸಂಭವವೆಂದು ಗ್ರಹಿಸಲಾದ ಪುನರುತ್ಥಾನವು ಕೇವಲ ಒಂದು ಸ್ವಾಭಾವಿಕ ದೈಹಿಕ ಕ್ರಿಯೆ

ಎಂದು ಫೋಟೋಗ್ರಾಫಿಯ ಸಹಾಯದಿಂದ ವ್ಯಕ್ತಗೊಳಿಸಲಾಗಿದೆ. ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಿಲ್ಲವೆಂದು ಅವರು ಆಧಾರಪೂರ್ವಕವಾಗಿ ತೋರಿಸಿರುವರು.

"ಕ್ರಿಸ್ತರ ಶವ ವಸ್ತ್ರದ ಕುರಿತು ಕಳೆದ ಒಂದು ಸಾವಿರ ವರ್ಷಗಳಿಂದ ಚರ್ಚೆಗಳು ನಡೆಯುತ್ತಿವೆ. ಈ ಬಟ್ಟೆಯನ್ನು ಕ್ರಿಸ್ತ ಶಕ 438ರಲ್ಲಿ ಕೋನ್‌ಸ್ಟೆಂಟ್‌ನೋಪಲ್‌ಗೆ ಎಂಡೋಕ್ಸಿ ರಾಣಿ (Queen Endoxi) ಯಿಂದ ಕಳುಹಿಸಿ ಕೊಡಲಾಯಿತು. ಅದು ಮೊತ್ತ ಮೊದಲಿಗೆ ಕೆಟಕೋಂಬುಗಳ (Catacombs–ಆದ್ಯ ಕಾಲದ ಕ್ರೈಸ್ತರು ನಿವಾಸಿಸಿದ ರಹಸ್ಯ ಗುಹೆಗಳು) ಸಮೀಪ ದೊರೆಯಿತು. ಅದು ಕೋನ್‌ಸ್ಟೆಂಟಿನೋಪಲ್‌ನಲ್ಲಿ ಏಳುನೂರು ವರ್ಷ ಇದ್ದಿತು. ಡೆಲಾ ರೋಚೆಸು ಆ ನಗರವನ್ನು ಆಕ್ರಮಿಸಿದಾಗ ಅದನ್ನು ಕೊಂಡು ಹೋದನು. ಒಂದು ಬೆಂಕಿಯವಘಡ ಸಂಭವಿಸಿದಾಗ ಈ ಬಟ್ಟೆಯು ಬೆಳ್ಳಿಯ ಪೆಟ್ಟಿಗೆಯಲ್ಲಿದ್ದಿತು. ಬೆಳ್ಳಿಯು ಕರಗುವಿಕೆಯಿಂದ ಈ ಬಟ್ಟೆಯು ಸ್ವಲ್ಪ ಅಸ್ಪಷ್ಟವಾಯಿತು. ಆದರೂ ಕ್ರಿಸ್ತರ ದೇಹದ ಗುರುತುಗಳು ಕಾಣಬಹುದಾಗಿತ್ತು.

"ಫ್ರಾನ್ಸಿನ ಜನರು ಈ ಬಟ್ಟೆಯನ್ನು ಪ್ರದರ್ಶಿಸಿ ತುಂಬಾ ಹಣ ಸಂಪಾದಿಸಿದರು. ಫ್ರಾನ್ಸಿನಿಂದ ಇದನ್ನು ಟ್ಯೂರಿನ್‌ಗೆ ತರಲಾಯಿತು. ಅಲ್ಲಿ ಮೂವತ್ತಮೂರು ವರ್ಷಗಳಿಗೊಮ್ಮೆ ಈ ಬಟ್ಟೆಯನ್ನು ಪ್ರದರ್ಶಿಸಲಾಗುತಿತ್ತು. ಕ್ರಿಸ್ತ ಶಕ 1898ರಲ್ಲಿ ಈ ಬಟ್ಟೆಯ ಫೋಟೋದ ನೆಗೆಟಿವನ್ನು ಸೂರ್ಯನ ಬೆಳಕಿನಲ್ಲಿ ಒಬ್ಬ ಇಟಾಲಿಯನ್ ಎಡ್ವಕೇಟ್ ವೀಕ್ಷಿಸಿದಾಗ ಆ ಬಟ್ಟೆಯ ಚಿತ್ರದಲ್ಲಿ ಕ್ರಿಸ್ತರ ದೇಹದ ಚಿತ್ರವು ಮೂಡಿ ಬಂದಿರುವುದನ್ನು ಕಂಡನು. ಆ ನೆಗೆಟಿವನ್ನು ಪ್ರಿಂಟು ಮಾಡಿದಾಗ ಕಳೆದ 1900 ವರ್ಷಗಳಿಂದ ಯಾರೂ ನೋಡದಿದ್ದ ಮನುಷ್ಯನ (ಎಂದರೆ ಯೇಸು ಕ್ರಿಸ್ತರ) ಮುಖವು ಕಂಡು ಬಂದಿತು.

"ಕ್ರಿ. ಶ. 1931ರಲ್ಲಿ ಈ ಬಟ್ಟೆ ಪುನ: ಪ್ರದರ್ಶಿತವಾದಾಗ ಗೀಸಪ್ ಎನ್‌ರಿಕ್ ಎಂಬ ಫೋಟೋಗ್ರಾಫರನು 6000ದಿಂದ 20,000 ವೋಲ್ಟ್‌ಗಳಷ್ಟು ವಿದ್ಯುತ್‌ಚಾಲಿತ ಬಲ್ಬುಗಳ ಪ್ರಕಾಶದಲ್ಲಿ ಒಬ್ಬ ಚರ್ಚ್ ಮುಖ್ಯಸ್ಥನ ಸನ್ನಿಧಿಯಲ್ಲಿ ಫೋಟೋ ತೆಗೆದನು. ಈ ಫೋಟೋ ಮೊದಲೇ ಹಿಯನೆಂಬವನು ತೋರಿಸಿಕೊಟ್ಟ ಸಂಗತಿಯನ್ನು ಪುನ: ಸ್ಪಷ್ಟಪಡಿಸಿತು. ಕಳೆದ 2000 ವರ್ಷಗಳಷ್ಟು ಕಾಲ ಚರ್ಚ್ ಕಲೆಗಾರರು ಕ್ರಿಸ್ತನದೆಂದು ಸೂಚಿಸುತ್ತಿದ್ದ ಶರೀರ ಮತ್ತು ಮುಖದ ಚಿತ್ರಣವನ್ನು ಹೋಲುವ ಚಿತ್ರವನ್ನೇ ಆ ಫೋಟೊ ತೋರಿಸಿಕೊಟ್ಟಿತು.

"ದಾಸ್ ಲಿನ್ನೆನ್ ಕರ್ಟ್ ಬೆರ್ನಾ ಸ್ಟುಲ್‌ಗಾರ್ಟ್ (Das Linnen Kurt Berna Stulgart by Hanas Naber Verlag) ಎಂಬ ಪುಸ್ತಕದಲ್ಲಿ ಮುದ್ರಿತವಾದ ಈ ಫೋಟೋ ಚಿತ್ರವನ್ನು ಒಬ್ಬ ವ್ಯಕ್ತಿ ನೋಡಿದರೆ ಆತನಿಗೆ ಚರ್ಚಿನ ಅಭಿಪ್ರಾಯಗಳು ವ್ಯಕ್ತವಾಗಬಹುದು. ಪೋಪ್ ಪಿಯುಸ್ IX ಈ ರೀತಿಹೇಳಿದರು:

"ಈ ಚಿತ್ರವನ್ನು ಯಾವುದೇ ಮಾನವ ಕೈ ರಚಿಸಿಲ್ಲ."

"ಬಟ್ಟೆ ಮತ್ತು ಚರಿತ್ರೆ ಎರಡು ಸಹ ಇದು ಕ್ರಿಸ್ತನ ಚಿತ್ರವೆಂದು ಹೇಳುತ್ತದೆ ಎಂದು ವಿಜ್ಞಾನಿಗಳು ನುಡಿದಿರುವರು. ಬಟ್ಟೆಯ ತಯಾರಿ ಮತ್ತು ಬಟ್ಟೆಯ ಗುಣಮಟ್ಟವು ಅದು ಪೊಂಪೇ ನಗರದಲ್ಲಿ ದೊರೆತ ಪುರಾತನ ಬಟ್ಟೆಗಳಿಗೆ ಸರಿ ಹೋಲುತ್ತವೆ.

"ಬಟ್ಟೆಯ ಒಂದು ಭಾಗವು ಶರೀರವನ್ನು ಸುತ್ತಲು ಉಪಯೋಗಿಸಲಾಯಿತೆಂದೂ ಇನ್ನೊಂದು ಭಾಗವು ತಲೆಯನ್ನು ಮುಚ್ಚಲು ಉಪಯೋಗಿಸಲಾಯಿತೆಂದೂ ತಿಳಿಯುತ್ತದೆ. ಕ್ರಿಸ್ತರ ಶರೀರಕ್ಕೆ ಲೇಪಿಸಿದ ಮುಲಾಮು ಶರೀರದ ಬಿಸಿಯೊಂದಿಗೆ ಕ್ರಿಸ್ತರ ಶರೀರದ ಗುರುತನ್ನು ಬಟ್ಟೆಯಲ್ಲಿ ಮೂಡಿಸಿತು. ಕ್ರಿಸ್ತರ ಶರೀರದಿಂದ ಸೂಸುತ್ತಿದ್ದ ರಕ್ತವು ಸಹ ಬಟ್ಟೆಯ ಮೇಲೆ ಗುರುತು ಉಂಟು ಮಾಡಿತು. ಕ್ರಿಸ್ತರ ತಲೆಗೆ ಹೊದಿಸಿದ ಮುಳ್ಳು ಕಿರೀಟವು ತಲೆಯ ಕೆಳಭಾಗದಲ್ಲಿ ಮತ್ತು ಹಣೆಯಲ್ಲಿ ಮಾಡಿದ ಗಾಯದ ಗುರುತುಗಳನ್ನು ಫೋಟೋ ತೋರಿಸುತ್ತವೆ. ಬೀಗಿದ ಬಲಗೆನ್ನೆಯನ್ನೂ, ಈಟಿಯ ತಿವಿತದಿಂದ ಗಾಯಗೊಂಡ ಬಲ ಪಾರ್ಶ್ವವನ್ನೂ ಮೊಳೆಗಳಿಂದ ಉಂಟಾದ ಗಾಯಗಳಿಂದ ಸೋರಿದ ರಕ್ತದ ಗುರುತುಗಳನ್ನು ಮತ್ತು ಶಿಲುಬೆಯೊಂದಿಗೆ ಒರೆಸಲ್ಪಟ್ಟು ಬೆನ್ನಿನಲ್ಲುಂಟಾದ ಗುರುತುಗಳನ್ನು ತೋರಿಸುತ್ತವೆ. ಆ ನೆಗೇಟಿವ್‌ನಲ್ಲಿ ಅತ್ಯಂತ ಆಶ್ಚರ್ಯಕರವಾದುದೇನೆಂದರೆ ಕ್ರಿಸ್ತರ ಮುಚ್ಚಿದ ಕಣ್ಣುಗಳು ತೆರೆದಂತೆ ಕಾಣುತ್ತವೆ. ಮೊಳೆಗಳು ಹಸ್ತದಲ್ಲಿ ನಾಟಲ್ಪಡಲಿಲ್ಲವೆಂದೂ ಮಣಿಗಂಟುಗಳಲ್ಲಿ ಮೊಳೆಗಳನ್ನು ನಾಟಲಾಯಿತೆಂದು ತಿಳಿಯುತ್ತದೆ. ಈಟಿಯು ಕ್ರಿಸ್ತರ ಹೃದಯಕ್ಕೆ ತಗಲಿಲ್ಲವೆಂದು ಸಹ ವ್ಯಕ್ತವಾಗುತ್ತದೆ. ಯೇಸು ಕ್ರಿಸ್ತರು ಪ್ರಾಣ ಬಿಟ್ಟರೆಂದು ಬೈಬಲ್ ಹೇಳುತ್ತದೆ. ಆದರೆ ಹೃದಯಸ್ಪಂದನ ನಿಂತಿರಲಿಲ್ಲವೆಂದು ವಿಜ್ಞಾನಿಗಳು ಒತ್ತಿ ಹೇಳುತ್ತಾರೆ.

"ಕ್ರಿಸ್ತರು ಶಿಲುಬೆಯಲ್ಲಿ ಪ್ರಾಣವಿಹೀನರಾಗಿ ಒಂದು ಗಂಟೆಯಷ್ಟು ಸಮಯವಿರುತ್ತಿದ್ದರೂ ರಕ್ತವು ಮರಗಟ್ಟಿ ಒಣಗಿ ಹೋಗುತಿತ್ತು ಮತ್ತು ರಕ್ತದ ಗುರುತುಗಳು ಬಟ್ಟೆಯಲ್ಲಿ ಉಂಟಾಗುತ್ತಿರಲಿಲ್ಲ. ಈ ಬಟ್ಟೆಯಲ್ಲಿರುವ ರಕ್ತದ ಗುರುತುಗಳು ಕ್ರಿಸ್ತರು ಶಿಲುಬೆಯಿಂದ ಇಳಿಸಿದಾಗ ಜೀವಂತವಾಗಿದ್ದರೆಂದು ಸೂಚಿಸುತ್ತವೆ."

[ ಮುಂದುವರಿಯುವುದು ]

Statement about the ownership and other particulars about news paper

## YUGARASHMI

Form IV (See Rule 8)

1. Place of Publication : Mangalore.
2. Periodicity of Publication: Quarterly.
3. Printer's Name: U. N. Srinivas Bhat
   Nationality: Indian
   Address : 62, Central Market, Mangalore.
4. Publisher's Name: Muhammad Yusuf
   Nationality: Indian
   Address: 23/1008, Ansari Road, Bunder, Mangalore-1.
5. Editor's Name : Muhammad Yusuf
   Nationality : Indian
   Address : 23/1008, Ansari Road, Bunder, Mangalore-1.
6. Name and address of individuals who own the news paper and partners or share-holding more than one per cent of the total capital } Jamath Ahmadiyya, 23/1008, Ansari Road, Bunder, Mangalore-1.

I, Muhammad Yusuf, hereby declare that the particulars given above are true to the best of my knowledge and belief.

Date: 1-3-1976 (Sd.) **Muhammad Yusuf**

## ಚಂದಾದಾರರ ಅವಗಾಹನೆಗೆ

ಈ ಸಂಚಿಕೆಯೂ ಸೇರಿ ನಿಮಗೆ ನಾಲ್ಕು ಸಂಚಿಕೆಗಳು ಕೈಸೇರಿವೆಯಾದರೆ ನಿಮ್ಮ ಮುಂದಿನ ವರ್ಷದ ಚಂದಾ ಹಣವನ್ನು ಕೂಡಲೇ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ:

The Editor:
**Yugarashmi Kannada Quarterly,**
23/1008, Ansari Road,
**Bunder, Mangalore-575001.**

Regd. with the Registrar of Newspapers for India. Regd. No. R.N. 27354/75
YUGARASHMI Kannada Quarterly, Jan.-Mar. 1976 / Sulh-Aman 1355


# BOOKS ON ISLAM AND CONTEMPORARY RELIGIONS

1. **Holy Quran with Arabic Text and English Translation** 12-00
2. **Ahmadiyyat or The True Islam** 8 00
   By Hazrat Mirza Bashiruddin Mahmud Ahmad.
3. **New World Order** 2-25
   By Hazrat Mirza Bashiruddin Mahmud Ahmad.
4. **The Teachings of Islam** 6-00
   By Hazrat Ghulam Ahmad
5. **Our Foreign Missions** 2-25
   By Mirza Mubarak Ahmad
6. **Where did Jesus Die?** 2-25
   By J. D. Shams
7. **The Tomb of Jesus** 0-75
   By sufi M. R. Bengali
8. **Jesus in India** 2-25
   By Mirza Ghulam Ahmad
9. **The Christian Doctrine of Atonement** 1-50
   By Dr. Mufti Muhammad Sadiq.
10. **An Interpretation of Islam** 1-50
    By Prof. Dr. Laura Veccia Vaglieri

Write to

**NAZIR DAWAT-O-TABLIGH**

P. O. QADIAN-143516. (Punjab)


Printed by: U. N Srinivas Bhat, at Aruna Press, Dongerkery Mangalore and Edited and Published by Muhammad Yusuf on behalf of Jamath Ahamadiyya Mangalore at 23/1008 Ansari Road, Bunder, Mangalore-575001.